MR SPEAKER: It is alright. It is already treated as seconded. But the difficulty is, she has not communicated to the Chair. I did not know about it. ನಾನು ತಮ್ಮೆಲ್ಲರಲ್ಲಿ ವಿನಂತಿ ಮಾಡುತ್ತೇನೆ, ಇವತ್ತಿನ ದಿವಸದ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡುವುದಿಲ್ಲ. ಮತ್ತೊಂದು ದಿವಸ ಪುನ : ತೆಗೆದುಕೊಳ್ಳುತ್ತೇನೆ. ಏಕೆಂದರೆ ಟೈಮ್ ಅಡ್ಜಸ್ಟ್ ಮಾಡಬೇಕಾಗಿರುವುದರಿಂದ ಹಾಗೂ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿರುವುದರಿಂದ ಇವತ್ತಿನ ಪ್ರಶ್ನೆಗಳನ್ನು ತಡೆಹಿಡಿದು ಮತ್ತೊಂದು ದಿವಸ ತೆಗೆದುಕೊಳ್ಳುತ್ತೇನೆ. ಯು.ಆರ್. ಸಭಾಪತಿಯವರು ತಾವು ಮಾತನಾಡಿ...

ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾರ್ಚ್ 8ರಂದು ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ಏನು ಭಾಷಣ ಮಾಡಿದ್ದಾರೆ, ಇದನ್ನು ನಾನು ಅನಿವಾರ್ಯವಾಗಿ ವಿರೋಧಿಸಲೇಬೇಕಾದ ಒಂದು ಸಂದರ್ಭದಲ್ಲಿ, ಇವತ್ತಿನ ರಾಜ್ಯಪಾಲರ ಭಾಷಣ ಕೇವಲ ಚರ್ವಿತಚರ್ವಣವಾಗಿದೆ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸಬಯಸುತ್ತೇನೆ. ನಮ್ಮ ಮಿತ್ರರಾದ ಮಾನ್ಯ ಶಿವರಾಮೇಗೌಡರು ಸರ್ಕಾರವನ್ನು ಬೆಂಬಲಿಸಿ ರಾಜ್ಯಪಾಲರ ಭಾಷಣ ಮೇಲೆ ಮಾತನಾಡಿದ್ದಾರೆ.

(6) ಮಾನ್ಯ ರಾಜ್ಯಪಾಲರ ಭಾಷಣದ ವಂದನಾರ್ಪಣ ಪ್ರಸ್ತಾಪದ ಮೇಲಿನ ಚರ್ಚೆ.

ಅಧ್ಯಕ್ಷರು :— ನಾವು ಏನು ಇದನ್ನು ಸರ್ಕ್ಯುಲೇಟ್ ಮಾಡಿದ್ದೇವೆ, ನೀವು ಅದನ್ನು ಪ್ರಿಂಟ್ ಮಾಡಬೇಡಿ. ಏಕೆಂದರೆ ನೀವು ಪ್ರಿಂಟ್ ಮಾಡಿದರೆ I cannot allow those questions to be taken up on the floor of the House on another day. So to enable the members to have their rights to take up those questions, I am requesting all the journalists, please do not print the answers for starred questions.

+ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ರಾಜ್ಯಪಾಲರ ಭಾಷಣ ಕೇವಲ ಚರ್ವಿತ ಭಾಷಣವಾಗಿದೆ ಎಂದು ಹೇಳಬಯಸುತ್ತೇನೆ. ಏಕೆಂದರೆ, ನನ್ನ ಮಿತ್ರರಾದ ಶ್ರೀ ಎಲ್.ಆರ್. ಶಿವರಾಮೇಗೌಡರು ಕಳೆದ ಎರಡು ದಿವಸಗಳಿಂದ ಸರ್ಕಾರವನ್ನು ಮಾನ್ಯ ರಾಜಪಾಲರ ಭಾಷಣದ ಮೂಲಕ ಸಮರ್ಥನೆಯನ್ನು ಮಾಡಲು ಹೊರಟಿರತಕ್ಕಂಥದನ್ನು ನೋಡಿದಾಗ ಅವರ ಸಮರ್ಥನೆ ಯಾವುದೇ ರೀತಿಯ ಹುರುಳಿಲ್ಲದ ಕೆಲವು ಮಾತುಗಳನ್ನು ಅವರು ಹೇಳುತ್ತಾ ಬಂದಿರುತ್ತಾರೆ. ಅದನ್ನು ಕೊನೆಯಲ್ಲಿ ಮಾನ್ಯ ಬೈರೇಗೌಡರು ಒಪ್ಪಿಕೊಂಡರು. ಅದನ್ನು ಅವರ ವೈಯಕ್ತಿಕ ವಿಚಾರಕ್ಕೆ ಬಿಟ್ಟಿದ್ದು. ಒಬ್ಬ ಸಹ ಸದಸ್ಯರ ಮೂಲಕ ತಮ್ಮ ಸರ್ಕಾರವನ್ನು ಜಸ್ಟಿಫಿಕೇಷನ್ ಮಾಡುವಂಥ ಪರಿಸ್ಥಿತಿ ಆಮೇಲೆ ಅನುಮೋದಕರು ಯಾರಿದ್ದಾರೆ, ಅವರಿಗೆ ಮಾತನಾಡಲು ಅವಕಾಶ ಇದ್ದರೂ ಕೂಡ ಅವರು ಈ ಸದನದಲ್ಲಿ ಹಾಜರಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಸದನದಲ್ಲಿ ನಿಮಗೆ ಅವರು ಬರೆದುಕೊಟ್ಟಿದ್ದರೆ ಅದು ಬರುತಿತ್ತು.

ಅಧ್ಯಕ್ಷರು :— ಅವರು ಅವರ ಪಕ್ಷದ ಲೀಡರ್‌ಗೆ ಬರೆದುಕೊಟ್ಟು ಹೋಗಿದ್ದಾರೆ.

SRI MALLIKARJUNA KHARGE :—If that is the understanding between the Chair and the Chief Minister. I do not know, but the House has not known about it.

MR. SPEAKER: There is no understanding. But, when no less a person than the leader of the House gets up and says that she has communicated to him, I have reason to believe it.

ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಈ ಸರ್ಕಾರ ಆಂತರಿಕವಾಗಿ ಸದನದ ಒಳಗೆ ಮತ್ತು ಸದನದ ಹೊರಗೆ ಗೊಂದಲಮಯ ವಾತಾವರಣವನ್ನು ದಿನೇ ದಿನೇ ಸ್ಪಷ್ಟವಾಗಿರುತ್ತಾ ಹೋಗುವ ಹಂತ ಬರುತ್ತಿದೆ. ಈಗ ರಾಜ್ಯಪಾಲರ ಭಾಷಣದಲ್ಲಿ ಇರುವ ವಿಷಯಗಳನ್ನೇ ಹಿಂದಿನ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಕೂಡ ಅದನ್ನೇ ಹೇಳಿಕೊಂಡು ಬಂದಿದ್ದಾರೆ. ಅದನ್ನು ಅನುಷ್ಠಾನಕ್ಕೆ ಕೂಡ ತರಲು ವಿಫಲವಾಗಿದ್ದರೂ ಕೂಡ ಮತ್ತೆ ಅದೇ ಮಾತುಗಳನ್ನು ಉಪಯೋಗಿಸಿಕೊಂಡು ಮತ್ತೆ ರಾಜ್ಯಪಾಲರಿಂದ ಈ ಸದನದಲ್ಲಿ ಭಾಷಣವನ್ನು ಕೊಡಿಸುತ್ತಿದ್ದಾರೆ. ಆದ್ದರಿಂದ ನಾನು ಸಂಪೂರ್ಣವಾಗಿ ಈ ರಾಜ್ಯಪಾಲರ ಭಾಷಣವನ್ನು ವಿರೋಧಿಸುತ್ತೇನೆ. ಅದಲ್ಲದೇ ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿರತಕ್ಕಂಥ ಯಾವ ವಿಚಾರ ಧಾರೆಗಳು ಇವೆ. ಇವರು ತಮ್ಮ ಆಡಳಿತದಲ್ಲಿ ಕುಂದುಕೊರತೆಗಳನ್ನು ಬದಿಗಿರಿಸಿ ಮುಚ್ಚಿ ಹಾಕುವ ಒಂದು ಪ್ರಯತ್ನವನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಡೆಸಿದ್ದಾರೆ. ನಾನು ಇದನ್ನು ಸ್ಪಷ್ಟವಾಗಿ ಹೇಳುತ್ತೇನೆ.ಮಾಹಿತಿ ತಂತ್ರಜ್ಞಾನದ ಪರಿಣಾಮಗಳನ್ನು ಪೂರ್ಣ ಗಮನದಲ್ಲಿ ಇಟ್ಟುಕೊಂಡು ಜನತೆಗೆ ದಕ್ಷ ಆಡಳಿತ ಹಾಗೂ ತ್ವರಿತವಾದ ಸೇವೆ ಒದಗಿಸುವಂಥ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ ಎನ್ನುವ ಮಾತನ್ನು ಅವರು ಉಪಯೋಗಿಸಿದ್ದಾರೆಯ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ನಡೆದಿರತಕ್ಕ ಆಗು-ಹೋಗುಗಳನ್ನು ನಾವು ಪರಿಗಣಿಸಿದರೆ ಅಲ್ಲಿ ಈ ಸರ್ಕಾರ ಅಸ್ಥಿತ್ವದಲ್ಲಿದ್ದು ಅಲ್ಲಿಯ ದಿನಚರಿಗಳನ್ನು ಈ ಆಡಳಿತದ ಮಾಹಿತಿಗಳನ್ನು ಮಾಹಿತಿ ತಂತ್ರಜ್ಞಾನದ ಪರಿಜ್ಞಾನದಿಂದ ಅವರು ದಿನೇ ದಿನೇ ಅದರ ವಿಶ್ಲೇಷಣೆ ಮಾಡುತ್ತಿದ್ದಾರೆಯೆ ಅಥವಾ ಅದಕ್ಕೆ ಸ್ಪಂದಿಸಿ ತ್ವರಿತವಾಗಿ ಜನರಿಗೆ ಸೇವೆಯನ್ನು ಕೊಡುತ್ತಿದ್ದಾರೆಯೇ ಎನ್ನುವುದನ್ನು ನೋಡಿದರೆ, ಈ ರಾಜ್ಯದಲ್ಲಿ ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಅನೇಕ ಜಿಲ್ಲೆಗಳಲ್ಲಿ ಕೊಲೆ, ದರೋಡೆ ಹಾಗೂ ಸುಲಿಗೆಗಳನ್ನು ನಿಗ್ರಹಿಸತಕ್ಕಂಥ ಪರಿಸ್ಥಿತಿ

ಈ ಸರ್ಕಾರ ಇಲ್ಲಿಯತನಕ ಮಾಡಿದೆಯೇ ನಾನು ಇದರ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ದಿನನಿತ್ಯದ ಪತ್ರಿಕೆಯನ್ನು ನೋಡಿದರೆ ಪ್ರತಿ ಜಿಲ್ಲೆಗಳಲ್ಲಿ ಒಂದು ಕೊಲೆ, ಒಂದು ದರೋಡೆ ಹಾಗೂ ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ನಿಗ್ರಹಿಸುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಬುದ್ಧಿವಂತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಇವತ್ತು ಒಂದು ರೀತಿಯ ಕೋಮು ಗಲಭೆ ಆಗಿರುವುದಕ್ಕೆ ಸರ್ಕಾರವನ್ನು ನಾನು ನೇರವಾಗಿ ಆಪಾದಿಸುತ್ತೇನೆ. ಇನ್ನು ಈ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ರೀತಿಯ ಗಲಭೆಗಳು ನಮ್ಮ ರಾಜ್ಯದಲ್ಲಿ ಇಲ್ಲ, ನಾವು ಎಲ್ಲರಿಗೂ ರಕ್ಷಣೆ ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ದಿನೇ ದಿನೇ ಬೆಂಗಳೂರು ಮಂಗಳೂರು ಜಿಲ್ಲೆಗಳಿಗೆ ಮುಂಬೈಯಿಂದ ಭೂಗತ ದೊರೆಗಳು ಬರುತ್ತಿದ್ದಾರೆ. ಬೆಂಗಳೂರಿನಲ್ಲಿ ಉಮರ ಕಾರ್ಯಾಚರಣೆ ದಿನೇ ದಿನೇ ಹೆಚ್ಚಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೂಡ ಇವತ್ತು ಹೆಚ್ಚಾಗುತ್ತಿದೆ. ಇದರ ಬಗ್ಗೆ ಸರ್ಕಾರ ಯಾವುದೇ ಗಮನವನ್ನು ಕೊಟ್ಟಿಲ್ಲ. ದಿನೇ ದಿನೇ ಭೂಗತ ದೊರೆಗಳ ಮೂಲಕ ಮಾದಕ ದ್ರವ್ಯವನ್ನು ನಮ್ಮ ರಾಜ್ಯಕ್ಕೆ ಕೋಟಿಗಟ್ಟಲೆ ಸಾಗಿಸುತ್ತಿದ್ದಾರೆ. ಈ ರಾಜ್ಯದಲ್ಲಿ ಮಾದಕ ವ್ಯಾಪಾರಿಗಳು ಬೇಕಾದಷ್ಟು ಜನ ತಳ ಊರಿದ್ದಾರೆ. ಎಷ್ಟೋ ಜನ ವಿದ್ಯಾರ್ಥಿಗಳು ಮಾದಕ ದ್ರವ್ಯದ ವ್ಯಸನಕ್ಕೆ ಬಲಿಯಾಗಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಪ್ರಶ್ನೆ ಕೇಳಿದರೆ ಎಷ್ಟು ಮಾದಕ ದ್ರವ್ಯದ ಜಾಲವನ್ನು ಪತ್ತೆ ಹಚ್ಚಿದ್ದೀರಿ ಎಂದು ಪ್ರಶ್ನೆ ಕೇಳಿದರೆ 10ಮಾದಕ ದ್ರವ್ಯದ ಜಾಲವನ್ನು ಪತ್ತೆ ಹಚ್ಚಿದ್ದೇವೆಂದು ಉತ್ತರವನ್ನು ಹೇಳಿದ್ದಾರೆ. ಇದರಲ್ಲಿ ಎಷ್ಟು ಜನರಿದ್ದಾರೆಂದು ಕೇಳಿದರೆ, ಕೆಲವರನ್ನು ಮಾತ್ರ ಪತ್ತೆ ಹಚ್ಚಿ ನಂತರ ಅವರನ್ನು ಬಿಡುಗಡೆಗೊಳಿಸಲಾಗಿದೆ ಎಂದು ಹಾರಿಕೆ ಉತ್ತರವನ್ನು ಕೊಡುತ್ತಿದ್ದಾರೆ. ಗ್ರಾಮೀಣಾಭಿವೃದ್ಧಿಯ ಬಗ್ಗೆ ನಾನು ಪದೇ ಪದೇ ಹೇಳುತ್ತಾ ಬಂದಿದ್ದೇನೆ. ನಿವು ತುಂಬಾ ಕಾಳಜಿ ವಹಿಸಿದ್ದೇವೆಂದು ಹೇಳುತ್ತಿರಿ. ಗ್ರಾಮೀಣ ಪ್ರದೇಶದಲ್ಲಿ ಬೇಕಾದಷ್ಟು ಜನರಿಗೆ ಮನೆಗಳನ್ನು ಕೊಟ್ಟಿದ್ದೇವೆ. ಕುಡಿಯುವ ನೀರಿನ ಯೋಜನೆ ಮಾಡಿದ್ದೇವೆ ಎನ್ನುವ ಮಾತನ್ನು ಹೇಳಬಯಸುತ್ತಿದ್ದೀರಿ. ಆದರೆ ನಾನು ಹೇಳುತ್ತಿದ್ದೇನೆ ಗ್ರಾಮಾಂತರ ಪ್ರದೇಶಗಳ ವ್ಯವಸ್ಥೆಗೆ ವರ್ಲ್ಡ್ ಬ್ಯಾಂಕಿಗೆ 400 ಕೋಟಿ ರೂಪಾಯಿಗಳ ಪ್ರಸ್ತಾವನೆ ಸಲ್ಲಿಸಿದ್ದಾರೆ. ಆದರಲ್ಲಿ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ಬಗ್ಗೆ ಹೆಗ್ಗಳಿಕೆ ಇದ್ದರೂ ಕೂಡ, ನಾನು ಗ್ರಾಮೀಣಾಭಿವೃದ್ಧಿ ಸಚಿವರನ್ನು ಕೇಳಬಯಸುತ್ತೇನೆ. ನೀವು ವರ್ಲ್ಡ್ ಬ್ಯಾಂಕಿನಿಂದ ಏನು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೀರಿ ಆ ಕಾರ್ಯಕ್ರಮಗಳು ಸ್ಥಗಿತಗೊಂಡಿದ್ದು ಇದರ ಬಗ್ಗೆ ಎಲ್ಲಾ ಶಾಸಕರು ಪ್ರಸ್ತಾಪಿಸಿದ್ದಾರೆ. ನೀವು ಆಗ ಹೇಳಿದಿರಿ ಮುಂದಿನ ಒಂದು ತಿಂಗಳಲ್ಲಿ ಆ ಕಾಮಗಾರಿಗಳನ್ನು ಸರಿಪಡಿಸುತ್ತೇವೆ. ಅದರ ಬಗ್ಗೆ ನೀವು ಏನು ಮಾಡಿದಿರಿ. ಇವತ್ತಿನವರೆಗೂ ಕೂಡ ಗುತ್ತಿಗೆ ಕೆಲಸವನ್ನು ಮಾಡುತ್ತಿಲ್ಲ. ಅದರ ಬದಲು ವರ್ಲ್ಡ್ ಬ್ಯಾಂಕಿನ ಕಾಮಗಾರಿಗಳು ಏನೂ ಪ್ರಗತಿ ಇಲ್ಲ. ಮತ್ತೆ ಚಾಲನೆಕೊಡುವಂಥ ಕೆಲಸ ನಿಮ್ಮಿಂದ ಆಗಲಿಲ್ಲ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನೊಂದು ನನ್ನ ಮತ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವರ್ಲ್ಡ್ ಬ್ಯಾಂಕಿನ 35 ಲಕ್ಷ ರೂಪಾಯಿಗಳ ಯೋಜನೆ, ಆ ಕೆಲಸ 4 ವರ್ಷದಿಂದ ಆಗುತ್ತಿದೆ. ಇದರ ಬಗ್ಗೆ ನಾನು ಕಳೆದ ಸದನದಲ್ಲಿ ಹೇಳಿದೆ, 40 ರಿಂದ 50 ಸಾವಿರ ರೂಪಾಯಿಗಳ ಕಾಮಗಾರಿಗಳು ಮಾತ್ರ ಬಾಕಿ ಇವೆ. ಸ್ಥಳೀಯರು ಆ ಕಾಮಗಾರಿಗಳು ನಾವು ಮಾಡುತ್ತೇವೆಂದು ಅಂದರೂ ಕೂಡ, ಸರ್ಕಾರ ಇನ್ನು ಮಾನ್ಯತೆ ಕೊಡದೆ ಹಾಗೇ ಬಿಟ್ಟಿದೆ, ಅದು ಉದ್ಘಾಟನೆಯಾಗಿ 6 ತಿಂಗಳಾಯಿತು. ಆ ಜನರಿಗೆ ನೀರನ್ನು ಕೊಡದೇ 35 ಲಕ್ಷ ರೂಪಾಯಿಗಳು ಏನು ಖರ್ಚಾಗಿದೆ ಅದು ಜನರಿಗೆ ಉಪಯೋಗ ಇಲ್ಲದಂಥ ಪರಿಸ್ಥಿತಿಯಾಗಿದೆ. ನೀವು ಗ್ರಾಮೀಣಾಭಿವೃದ್ಧಿಗೆ ಕೊಡುವಂಥ ಸೇವೆ, ಇವತ್ತು ಜಾಗತೀಕ ಬ್ಯಾಂಕಿನಿಂದ ಬಂದ ಹಣ ಎಷ್ಟು ದುರುಪಯೋಗವಾಗಿದೆ. ಅದರಲ್ಲಿ ಯಾರು ಶ್ಯಾಮೀಲಾಗಿದ್ದಾರೆ, ಅದರಲ್ಲಿ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಶಾಮಿಲಾಗಿದ್ದರೆ ಎನ್ನುವುದರ ಬಗ್ಗೆ ತನಿಖೆ ಮಾಡಬೇಕಾಗಿದೆ. ನೀವು ತನಿಖೆ ಮಾಡದಿದ್ದರೆ ರಾಜ್ಯಪಾಲರ ಭಾಷಣದಿಂದು ನೀವು ಜನರಿಗೆ ನೀಡಿರುವ ಸಂದೇಶ ಸುಳ್ಳು ಎನ್ನುವುದನ್ನು ನಾನು ಪ್ರತಿಪಾದಿಸುತ್ತೇನೆ. ಸುಮಾರು 200 ಕೋಟಿ ರೂಪಾಯಿಗಳ ವೆಚ್ಚದ ಕಾಮಗಾರಿಗಳು ಇವೆ. ಅದರಲ್ಲಿ 75 ಭಾಗ ಕಾಮಗಾರಿಗಳು ಸ್ಥಗಿತ ಆಗಿದ್ದನ್ನು ಆ ಸದನದಲ್ಲಿ ನಾನು ಹೇಳಬಯಸುತ್ತೇನೆ. ಇದು ಗ್ರಾಮೀಣಾಭಿವೃದ್ಧಿಯ ನೇರವಾದ ವಿಚಾರ. ಇದರ ಬಗ್ಗೆ ಕಳೆದ ಸದನದಲ್ಲಿ ಕೂಡ ಪ್ರಸ್ತಾವನೆಯಾಗಿದೆ, ನಾವು ಗಂಭೀರವಾಗಿ ಕೆಗೆದುಕೊಳ್ಳುತ್ತಿದ್ದೇರೆ ಇದರ ಬಗ್ಗೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಂಡುದ್ದೀರಾ? ಕಂಟ್ರಾಕ್ಟ್ ಕೊಟ್ಟಿದ್ದನ್ನು ಅವರು ಪೂರ್ಣಗೊಳಿಸುತ್ತಾರೆಯೇ ಕೇವಲ ಅದು ಇಲ್ಲಿ ಪುಸ್ತಕದಲ್ಲಿ ದಾಖಲೆಯಾಗಿ ಉಳಿಯದೇ ಅದು ಅಸ್ತಿತ್ವಕ್ಕೆ ಬರಲಿ ಎನ್ನು ಮಾತನ್ನು ತಮಗೆ ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇನ್ನು ರಾಜ್ಯಪಾಲರ ಭಾಷಣದಲ್ಲಿನ ವಿಷಯದ ಬಗ್ಗೆ ಮಾತನಾಡುವಾಗ ಮಾನ್ಯ ಶ್ರೀ ಶಿವರಾಮೇಗೌಡರು ಹೇಳಿದರು. ರಾಜ್ಯದ ಯುವಕರಿಗೆ 40 ಸಾವಿರ ಉದ್ಯೋಗಾವಕಾಶವನ್ನು ಕೊಡುವ ಸಲುವಾಗಿ 8 ಸಾವಿರ ಸಣ್ಣ ಕೈಗಾರಿತೆಗಳ ನೋಂದಣಿಯಾಗಿದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ನನಗೆ ಬಹಳ ದು:ಖವಾಗಿದೆಯ ಕಳೆದ ಮೂರು ವರ್ಷಗಳಲ್ಲಿ ಕೂಡ ಈ ಸದನದೊಳಗೆ ಏನು ಹೇಳುತ್ತಾ ಬಂದಿದ್ದಾರೆ, ಆದರೆ ಸಣ್ಣ ಕೈಗಾರಿಕೆಗಳು ನಿಮ್ಮಿಂದ ದಮನವಾಗಿದೆ ಎಂದು ಕಿರು ಕೈಗಾರಿಕೆಯ ಘಟಕಗಳು ಮುಚ್ಚುವಂಥ ಪರಿಸ್ಥಿತಿ ಇವತ್ತು ಆಗುತ್ತಿದೆ. ಒಂದು ಕಡೆ ಬೃಹತ್ ಕೈಗಾರಿಕೆಗಳನ್ನು ಆಹ್ವಾನ ಮಾಡಿ ಉದ್ಯೋಗಾವಕಾಶವನ್ನು ಕೊಟ್ಟರೆ ಪರಿಹಾರವಾಗುತ್ತದೆಂದು ಹೇಳುತ್ತಿದ್ದಾರೆ. ಇದರಿಂದ ಸಹಸ್ರ ಸಹಸ್ರ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿ ಕೊಡುವಂಥ ಪ್ರಶ್ನೆ ಉದ್ಭವ ಆಗುತ್ತಿದೆ ಎನ್ನುವ ಮಾತನ್ನು ಹೇಳಿದ್ದು ಅದು ಇವತ್ತು ಸುಳ್ಳಾಗಿದೆ. ಸುಮಾರು 45 ಕಿರು ಕೈಗಾರಿಕೆಗಳ ಘಟಕಗಳು ಇದ್ದು ರಾಜ್ಯದಲ್ಲಿ ಈಗ ಅವರ ಭಾವನೆ ಏನಾಗಿದೆ? ನಮ್ಮ ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗ ಸಣ್ಣ

ಕೈಗಾರಿಕೆಗಳ ಘಟಕಗಳಿಗೆ ಸಹಾಯಧನವನ್ನು ಬಿಡುಗಡೆಗೊಳಿಸಿದ್ದು ಪ್ರತಿ ವರ್ಷ ಅದಕ್ಕೆ ಹಂತ ಹಂತವಾಗಿ ಹಣವನ್ನು ಬಿಡುಗಡೆಗೊಳಿಸಿದ್ದು, ಅದರ ಮಾಹಿತಿಯನ್ನು ತಮ್ಮ ಮುಂದೆ ನಾನು ಇಡಲಿ ಇಚ್ಛಿಪಡುತ್ತೇನೆ. 1993-94ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷ ಇರುವಾಗ ಬಜೆಟ್ ಪ್ರಾವಿಜನ್ 37 ಕೋಟಿ ರೂಪಾಯಿ ನಾವು ಮಾಡಿದ್ದೇವೆ. ಬ್ಯಾಕ್‌ಲಾಗ್ ಕೇವಲ 35 ಸಾವಿರ ರೂಪಾಯಿಗಳು 1994-95ನೇ ಸಾಲಿಗೆ 35 ಕೋಟಿ ರೂಗಳು ಬಜೆಟ್ ಅಲೋಕೆಷನ್ ಇದ್ದಿದ್ದರೆ 35 ಕೋಟಿ. ರೂಗಳನ್ನು ಮೊತ್ತವನ್ನು ಬಿಡುಗಡೆ ಮಾಡಿದ್ದಾರೆ. 1994-95 ರಲ್ಲಿ 35 ಕೋಟಿ ರೂಗಳನ್ನು ಬಿಡುಗಡೆ ಮಾಡಿದರೂ ಕೂಡ 6 ಕೋಟಿ ರೂಪಾಯಿಗಳು ಸಂದಾಯ ಮಾಡಲಿಕ್ಕೆ ಸಹಾಯಧನ ಬಾಕಿ ಉಳಿಯಿತು. 1995-96ನೇ ಸಾಲಿಗೆ ಈ ಮೊತ್ತ 6 ಕೋಟಿ ಇದ್ದದ್ದು 40.95 ಲಕ್ಷಕ್ಕೆ ಬಂದು ನಿಂತಿದೆ. ಪುನ 1996-97ನೇ ಸಾಲಿನಲ್ಲಿ 50 ಕೋಟಿ ರೂಗಳನ್ನು ಬಜೆಟ್ ಪ್ರಾವಿಜನ್ ಇವರು ಇಟ್ಟುಕೊಂಡರು ಆದರೆ ಆ ವರ್ಷ 28.50 ಕೋಟಿ ರೂಗಳು ಮಾತ್ರ ಬಿಡುಗಡೆ ಮಾಡಿದರು. ಬ್ಯಾಕ್‌ಲಾಗ್ ಸಹಾಯಧನವು 120 ಕೋಟಿ ರೂಗಳು ಮಾತ್ರ ಉಳಿಯಿತು. ಇದನ್ನು ನಾನು ಸದನದಲ್ಲಿ ಹೇಳಿಕೊಂಡು ಬಂದಿದ್ದೇನೆ. ಸಣ್ಣ ಕೈಗಾರಿಕೆಗೆ ಕೊಡತಕ್ಕಂತಹ ಸಹಾಯಧನವನ್ನು ತಾವು ಬಿಡುಗಡೆಗೊಳಿಸಬೇಕು. ಆ ಮೂಲಕ ಯುವಕರಿಗೆ ಮಾರ್ಗದರ್ಶನವನ್ನು ಕೊಡಬೇಕು. ಸಹಾಯಧನದ ಮೇಲೆ ಇವತ್ತು ಪಡೆದುಕೊಂಡಿರತಕ್ಕಂತಹ ಬ್ರಿಡ್ಜ್ ಲೋನ್‌ಗಳಲ್ಲಿ ಅದರ ಮೇಲೆ ಬಡ್ಡಿಗೆ ಬಡ್ಡಿ ಸೇರಿಕೊಂಡು ಇವತ್ತು ಆ ಕೈಗಾರಿಕಾ ಘಟಕಗಳಿಗೆ ಪ್ರಾರಂಭಮಾಡಲು ಆರ್ಥಿಕ ಸಂಸ್ಥೆಗಳು ಸಾಲವನ್ನು ನೀಡಿದ್ದು ಅದನ್ನು ಮುಚ್ಚುವಂತಹ ಪರಿಸ್ಥಿತಿ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ಮತ್ತೇ 1997-98ನೇ ಸಾಲಿನಲ್ಲಿ 36 ಕೋಟಿ ರೂಗಳನ್ನು ಬಜೆಟ್ ಅಲೋಕೇಷನ್‌ನ್ನು ಇಟ್ಟರು. 1996-97ನೇ ಸಾಲಿನಲ್ಲಿ 50 ಕೋಟಿ ರೂಗಳ ಬಜೆಟ್ ಅಲೋಕೇಷನ್‌ನ್ನು ಇಟ್ಟು ಅದರಲ್ಲಿ 28 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಉಳಿದ ಹಣ ಪುನ ಅಲ್ಲಿಗೇ ಹೋಯಿತು. ಮತ್ತೇ 1997-98ನೇ ಸಾಲಿಗೆ 36 ಕೋಟಿ ರೂಪಾಯಿಗಳು ಬಜೆಟ್ ಅಲೋಕೇಷನ್ ಇದ್ದರೂ ಕೂಡ ಅದರಲ್ಲಿ ಕೇವಲ 21.50 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆಗೊಳಿಸಿದರು. ಸಹಾಯಧನದ ಪಾವತಿ ಬಾಕಿಗೆ ಇರುವಂತಹ ಹಣ 227.13 ಕೋಟಿ ರೂಪಾಯಿಗಳಿಗೆ ಹೋಯಿತು. ಇವತ್ತು 1998-99ನೇ ಸಾಲಿಗೆ ಬಂದಾಗ ನಮ್ಮ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ನಾನು ಕಳೆದ ಅಧಿವೇಶನದಲ್ಲಿ ಹೇಳಿದಾಗ ಮಾನ್ಯ ಕೈಗಾರಿಕಾ ಸಚಿವರಾಗಿದ್ದ ಮೊಯಿದ್ದಿನ್‌ರವರು ಇದೇ ಸದನದಲ್ಲಿ ಹೇಳಿದರು. ನಾವು 200 ಕೋಟಿ ರೂಪಾಯಿಗಳ ಸಹಾಯಧನವನ್ನು ಸಾಲ ಮಾಡುತ್ತೇವೆಂದು ಹೇಳಿದರು. ಅವರು ಪತ್ರಿಕಾ ಗೋಷ್ಟಿಯಲ್ಲಿ ಸಹಾಯಧನವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದರು. ಇವತ್ತು 1998-99ನೇ ಸಾಲಿಗೆ 300 ಕೋಟಿ ರೂಪಾಯಿಗಳ ಸಹಾಯಧನವು

ಪಾವತಿಗೆ ಬಾಕಿ ಉಳಿದಿದೆ. 1998-99ನೇ ಸಾಲಿನಲ್ಲಿ ಮುಂಗಡಪತ್ರದಲ್ಲಿ 36 ಕೋಟಿ ರೂಪಾಯಿಗಳನ್ನು ಬಜೆಟ್ ಪ್ರಾವಿಜನ್‌ನ್ನು ಇಟ್ಟರೂ ಕೂಡ ಇವತ್ತು 12ನೇ ತಾರೀಖು ಮಾರ್ಚ್ ಆಗಿದೆ. ಈ ದಿನಾಂಕದವರೆಗೆ ಕೇವಲ 24 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆಗೊಳಿಸಿದ್ದಾರೆ. ಉಳಿದ 12 ಕೋಟಿ ರೂಪಾಯಿಗಳ ಬಾಕಿ ಹಣವನ್ನು ಇವರು ಯಾವಾಗ ಬಿಡುಗಡೆಗೊಳಿಸುತ್ತಾರೆ? ಬಾಕಿ ಉಳಿದಿರತಕ್ಕಂತಹ 300 ಕೋಟಿ ರೂಪಾಯಿಗಳ ಸಹಾಯಧನವನ್ನು ಇವರು ಯಾವ ರೂಪದಲ್ಲಿ ಬಿಡುಗಡೆಗೊಳಿಸುತ್ತಾರೆ ಎನ್ನುವುದನ್ನು ಇವರು ಸ್ಪಷ್ಟಪಡಿಸಬೇಕು. ಇವರು ರಾಜ್ಯದ ಯುವಕರಿಗೆ ಕೊಡುವಂತಹ ಸಂದೇಶ ಏನು? ಇವತ್ತು ಇವರು ಬೃಹತ್ ಕೈಗಾರಿಗಳನ್ನು ಆಹ್ವಾನ ಮಾಡುವ ಹಿನ್ನಲೆಯಲ್ಲಿ ಏನು ನಡೆದಿದೆ. ಆ ಬಹುರಾಷ್ಟ್ರೀಯ ಕಂಪನಿಯವರನ್ನು ಇಲ್ಲಿಗೆ ಆಹ್ವಾನಿಸಿ, ಇಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಂತಹ ನಿಪುಗಳನ್ನು ಹೇಳಿಕೊಂಡು ಬಂದಿದ್ದಾರೆ. ಇವರು ಎಷ್ಟು ಜನರಿಗೆ ಉದ್ಯೋಗಾವಕಾಶಗಳನ್ನು ಕೊಟ್ಟಿದ್ದಾರೆ? ಸಾವಿರ, ಸಾವಿರ ಎಕರೆ ಭೂಮಿಯನ್ನು ಅವರಿಗೆ ದಾನ ಕೊಟ್ಟು ಅವರಿಗೆ ಅತ್ಯಂತ ಜುಜುಬಿ ಮೊತ್ತಕ್ಕೆ ಆ ಭೂಮಿಯನ್ನು ಕೊಟ್ಟು, ಅವರಿಗೆ ನಾವು ತೆರಿಗೆ ವಿನಾಯಿತಿ ಮಾಡುತ್ತೇವೆ, ಅವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳುವಾಗ ಆದರೆ ಸಣ್ಣ ಕೈಗಾರಿಕೆಯವರು ಏನು ಪಾಪ ಮಾಡಿದ್ದಾರೆಂದು ನಾನು ಕೇಳಬಯಸುತ್ತೇನೆ ಇವತ್ತು ಸಣ್ಣ ಕೈಗಾರಿಕೆಯವರ ಪರಿಸ್ಥಿತಿ ಏನಾಗಿದೆ ಎಂದರೆ ಒಂದು ಕಡೆಯಿಂದ ವಿದ್ಯುತ್ ಮಂಡಳಿಯವರಿಂದ ಕೊಡುತ್ತಿರುವ ಉಪದ್ರವ ಅವುರ ಸಣ್ಣ ಕೈಗಾರಿಕೆಗಳಲ್ಲಿ ಉತ್ಪಾದನೆಯನ್ನು ಬೆಳಸಬೇಕಾದರೆ ವಿದ್ಯುತ್‌ನ್ನು ನಿಲ್ಲಿಸಿರುವುದರಿಂದ ಅಲ್ಲಿ ಉತ್ಪಾದನೆಯೂ ಕುಂಠಿತವಾಗಿದೆ. ಒಂದು ಕಡೆಯಿಂದ ಅವರು ಸಂಪಾದನೆ ಮಾಡಿರತಕ್ಕಂತಹ ಹಣವನ್ನು ಇವರು ಬ್ಯಾಂಕಿಗೂ ಕಟ್ಟಲಿಕ್ಕೆ ಸಾಧ್ಯವಾಗದೆ ಇತ್ತಿಚೆಗೆ ಅವರಿಗೆ ಸಂದರ್ಭಕ್ಕೆ ಸರಿಯಾಗಿ ಬರಬೇಕಾದ ಸಹಾಯಧನವನ್ನು ಕೊಡದೆ ಆ ಕೈಗಾರಿಕಾಘಟಕಗಳೆಲ್ಲಾ ಇವತ್ತು ಮುಚ್ಚುವಂತಹ ಪರಿಸ್ಥಿತಿಗೆ ಇವರು ಹೊಣೆಗಾರರಾಗಿದ್ದರೆ ಈ ಸರ್ಕಾರದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಅವರು ಎಷ್ಟು ಚೆನ್ನಾಗಿ ಪ್ರಸ್ತಾವನೆಯನ್ನು ಮಾಡಿದ್ದಾರೆಂದರೆ ಎಂಟು ಸಾವಿರ ನೋಂದಣಿಯಾಗಿದೆ ಎಂದು ಹೇಳಿದ್ದರೆ ಆ ಸಹಾಯಧನದ ಬಗ್ಗೆ ಒಂದಿಷ್ಟು ಪ್ರಸ್ತವನೆ ಇಲ್ಲ ಎಂದು ಹೇಳಿದರೆ ಇದರ ಉದ್ದೇಶವೇನು? ಇವರು ಸಹಾಯಧನವನ್ನು ಕೊಡುತ್ತಾ ಇಲ್ಲವೇ? ಹಾಗಾದರೆ ಈ ರಾಜ್ಯದ ಎಲ್ಲಾ ಸಣ್ಣ ಕೈಗಾರಿಕೆಗಳು ಮುಚ್ಚಲ್ಪಡಬೇಕೆ? ಎನ್ನುವ ಮಾತನ್ನು ತಮ್ಮ ಮುಖೇನ ಸರ್ಕಾರಕ್ಕೆ ಕೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ, ನಾನು ಕಳಕಳಿಯಿಂದ ವಿನಂತಿಸುತ್ತೇನೆ. ನಮ್ಮಲ್ಲಿ 300 ಕೋಟಿ ರೂಪಾಯಿಗಳ ಸಹಾಯಧನವು ಬಾಕಿ ಇದೆ. ದಯವಿಟ್ಟು ಆ ಸಹಾಯಧನವನ್ನು ಕೊಡುವ ಬಗ್ಗೆ ಮುಂದಿನ ಮುಂಗಡಪತ್ರದಲ್ಲಿ ತಾವು ಇರಿಸಬೇಕು. ಕಳೆದ ವರ್ಷದ ಮುಂಗಡ ಪತ್ರದಲ್ಲಿ ಇನ್ನೂ 12 ಕೋಟಿ ರೂಪಾಯಿಗಳು ಬಾಕಿ ಇದೆ, ನೀವು

ಅದನ್ನು ರಿಲೀಸ್ ಮಾಡಲಿಲ್ಲ. ದಯವಿಟ್ಟು ಆ ಹಣವನ್ನು ಮಾರ್ಚ್ ತಿಂಗಳೊಳಗೆ ರಿಲೀಸ್ ಮಾಡಿ. ಎಲ್ಲಿಂದಲೋ ಅವರು ಆರ್ಥಿಕ ಸಂಸ್ಥೆಗಳಿಂದ ರಾತ್ರಿ ಹಗಲು ದುಡಿದು ಅವರು ಸಣ್ಣ ಕೈಗಾರಿಕೆಗಳನ್ನು ಮಾಡಿದ್ದು, ಒಂದೊಂದು ಘಟಕದಲ್ಲಿ 100 ರಿಂದ 400 ವರೆಗೆ ಜನಗಳು ಉದ್ಯೋಗದಲ್ಲಿದ್ದಾರೆ. ಅವರನ್ನು ರಸ್ತೆಗೆ ತಳ್ಳಬೇಡಿ. ಇಂತಹ ಕೆಲಸ ನಡೆಯಬಾರದು ಎಂಬ ಮಾತನ್ನು ನಾನು ಹೇಳುತ್ತೇನೆ. ಇವತ್ತು ರಾಜ್ಯಪಾಲರ. ಭಾಷಣದಲ್ಲಿ ಹೊಸ ಜಿಲ್ಲೆಗಳ ಬಗ್ಗೆ ಯಾವುದೇ ಪ್ರಸ್ತಾವನೆಯೂ ಕೂಡ ಇಲ್ಲ. ಹೊಸ ಜಿಲ್ಲೆಯು 1997ನೇ ಇಸವಿಯ ಆಗಸ್ಟ್‌ನಲ್ಲಿ ಉದ್ಘಾಟನೆಯಾಗಿದ್ದು ಇಂದಿಗೆ ಒಂದುವರೆ ವರ್ಷವಾಗಿದೆ. ಹೊಸ ಜಿಲ್ಲೆಯಲ್ಲಿ ಅನೇಕ ಇಲಾಖೆಗಳು ಕೂಡ ಇನ್ನೂ ಸ್ಥಾಪನೆಯಾಗಿಲ್ಲ. ಮೊನ್ನೆ ಮೊನ್ನೆ ತಾನೇ ಲೋಕೋಪಯೋಗಿ ಇಲಾಖೆಯ ಉಡುಪಿ ವಿಭಾಗದ ಉದ್ಘಾಟನೆಯನ್ನು ನನ್ನ ಕೈಯಿಂದ ಮಾಡಿಸಿದರು. ಅಲ್ಲಿ ಒಬ್ಬ ಎಕ್ಸಿಕ್ಯೂಟೀವ್ ಇಂಜಿನಿಯರವರನ್ನು ಬಿಟ್ಟರೆ ಬೇರೆ ಯಾರೂ ಅಲ್ಲಿ ಇಲ್ಲ. ಅಲ್ಲಿ ಬರೀ ಬೆಂಚು ಮತ್ತು ಕುರ್ಚಿಗಳಿವೆ. ಅಲ್ಲಿ ಬೇರೇನೂ ಇಲ್ಲ. ನೀವು ಏಳು ಹೊಸ ಜಿಲ್ಲೆಗಳೆಂದು ಘೋಷಣೆ ಮಾಡಿ ಒಂದೂವರೆ ವರ್ಷವಾದರೂ ಅದಕ್ಕೆ ಬೇಕಾದಂತಹ ಹಣವನ್ನು ಒದಗಿಸುವುದಕ್ಕೆ ಆಗುತ್ತಿಲ್ಲವೆಂದರೆ, ನೀವು ಬರೀ ಪ್ರಚಾರಕ್ಕಾಗಿಯೇ ಮಾಡಿದ್ದೀರಿ ಎಂದು ನನ್ನ ಅನಿಸಿಕೆಯಾಗಿದೆ. ನೀವು ಹೊಸ ಜಿಲ್ಲೆ ಎಂದು ಮಾಡಿಕೊಂಡು ಏನು ಪ್ರಯೋಜನವಾಯಿತು ಎಂದು ಜನ ಇವತ್ತು ನಮ್ಮ ಹತ್ತಿರ ಕೇಳುತ್ತಿದ್ದಾರೆ.

ಶ್ರೀ ಜೆ.ಹೆಚ್. ಪಟೀಲ್ (ಮುಖ್ಯಮಂತ್ರಿಗಳು) :— ಅಲ್ಲಿ ಜಿಲ್ಲಾಧಿಕಾರಿಗಳು ಇದ್ದಾರಲ್ಲಾ.

ಶ್ರೀ ಯು.ಆರ್. ಸಭಾಪತಿ :— ಕೇವಲ ಜಿಲ್ಲಾಧಿಕಾರಿಗಳನ್ನು ಇಟ್ಟುಕೊಂಡು ಎಲ್ಲಾ ಇಲಾಖೆಗಳನ್ನು ನಡೆಸುವುದಕ್ಕೆ ಆಗುತ್ತದೆಯೇ? ಅವರು ಕೇವಲ ಕಂದಾಯ ಇಲಾಖೆಯನ್ನು ನೋಡಿಕೊಳ್ಳುತ್ತಾರೆ. ಅದರಲ್ಲಿಯೂ ಕೂಡ ತಾಲ್ಲೂಕು ಕಛೇರಿಯಲ್ಲಿ ಬೇಕಾದಂತಹ ಸಿಬ್ಬಂದಿಗಳು ಇಲ್ಲ. ನಮ್ಮ ತಾಲ್ಲೂಕು ಕಛೇರಿಯಲ್ಲಿ ತಹಸೀಲ್ದಾರರೇ ಇಲ್ಲ.

ಶ್ರೀ ಜೆ.ಹೆಚ್. ಪಟೀಲ್ (ಮುಖ್ಯಮಂತ್ರಿಗಳು) :— ಉಡುಪಿ ಜಿಲ್ಲೆಯನ್ನು ಕ್ಯಾನ್ಸಲ್ ಮಾಡೋಣವೇ?

ಶ್ರೀ ಯು.ಆರ್. ಸಭಾಪತಿ :— ಅದು ನಿಮಗೆ ಬಿಟ್ಟ ವಿಷಯ. ನಾನು ಅದನ್ನು ಹೇಳುತ್ತಿಲ್ಲ. ನೀವು ಯಾವಾಗ ಬಂದು ಕೃಷ್ಣ ಜನ್ಮಾಷ್ಟಮಿ ದಿವಸ ಅಲ್ಲಿ ಕೃಷ್ಣನಿಗೆ ನಮಸ್ಕಾರ ಮಾಡಿ ನೀವು ಉದ್ಘಾಟನೆ ಮಾಡಿಸಿದ್ದೀರಿ, ಅದಕ್ಕೆ ನಾವು ಬಹಳ ಸಂತೋಷವನ್ನು ಪಟ್ಟೆವು. ನಿಮ್ಮ ಕಾಲದಲ್ಲಿ ಉಡುಪಿಯು ಜಿಲ್ಲೆಯಾಯಿತು ಎಂದು ಹೇಳಿ ಸಂತೋಷಪಟ್ಟರು ಕೂಡ ಇವತ್ತು ಒಂದೂವರೆ ವರ್ಷದಲ್ಲಿ ಅದಕ್ಕೆ ಸರಿಯಾದ ಪರಿಪೂರ್ಣತೆಯನ್ನು ಕಲ್ಪಿಸಿಕೊಡುವುದಕ್ಕೆ ಆಗಲಿಲ್ಲವಲ್ಲಾ. ನಾವು ಮುಂಬರುವ ಚುನಾವಣೆಗೆ

ಹೋಗುತ್ತಿದ್ದೇವೆ. ಚುನಾವಣೆಗೆ ನಿಮ್ಮ ಪಕ್ಷದವರೂ ಸಹ ಜನಗಳ ಮುಂದೆ ಹೋಗುತ್ತಿದ್ದೀರಿ. ಆಗ ನಾವಾಗಲೀ ಅಥವಾ ನೀವಾಗಲಿ ಹೇಳುವ ಮಾತು ಏನು? ತಾವು ಉಡುಪಿಯನ್ನು ಜಿಲ್ಲೆಯೆಂದು ಘೋಷಿಸಿದ್ದೀರಿ ಆದರೆ ಇಲಾಖೆಗಳು ಏನು ಕೆಲಸ ಮಾಡುತ್ತಿವೆ ಎಂದು ಕೇಳಿದರೆ ನಾವೇನು ಉತ್ತರ ಕೊಡುವುದಕ್ಕೆ ಸಾಧ್ಯ? ಇದರ ಬಗ್ಗೆ ನಾನು ತಮ್ಮಲ್ಲಿ ಪ್ರಾಮಾಣಿಕವಾಗಿ ಕಳಕಳಿಯಿಂದ ವಿನಂತಿಸುತ್ತಿದ್ದೇನೆ. ಇಡೀ ವಿಧಾನಸಭೆಯು ಜರುಗುವಾಗ ನಮ್ಮ ಸೋದರಿಯರಾದ ಅಂಗನವಾಡಿ ಕಾರಯಕರ್ತೆಯರು ಅಲ್ಲಿ ಸ್ಟ್ರೈಕ್ ಮಾಡುತ್ತಿದ್ದಾರೆ. ಆ ಸೋದರಿಯರು ರಾಜ್ಯಾದ್ಯಂತ ಬಂದು ಅಲ್ಲಿ ದೊಡ್ಡ ಧರಣಿ ಮುಷ್ಕರವನ್ನು ಮಾಡಿದ್ದರು. ಅವರೆಲ್ಲಾ ಮೈದಾನದಲ್ಲಿ ಬೆಳಗಿನಿಂದ ಸಾಯಂಕಾಲದ ತನಕ ಇರುತ್ತಾರೆ. ಅವರ ಬೇಡಿಕೆಯನ್ನು ಈಡೇರಿಸಬೇಕೆಂದು ನಾನು ಐದು ವರ್ಷದಿಂದ ಹೋರಾಟ ಮಾಡಿದರೂ ಕೂಡ ನೀವು ಅದಕ್ಕೆ ಒಂದಿಷ್ಟು ಮಾನ್ಯತೆ ಮಾಡಲಿಲ್ಲವಲ್ಲಾ ಎಂಬ ವೇದನೆ ನನಗೆ ಆಗಿದೆ. ಅದೇ ರೀತಿಯಾಗಿ ಗ್ರಾಮ ಸಹಾಯಕರು, ಪ್ರತಿ ಅಧಿವೇಶನದಲ್ಲಿ ನಮಗೆ ನಿಮ್ಮ ಕಾಲಿಂಗ್ ಅಟೆನ್‌ಷನ್, ಶೂನ್ಯ ವೇಳೆಯಲ್ಲಿ ಪ್ರಸ್ತಾವಿಸುವುದು, ಯಾವುದಾದರೂ ರೀತಿಯಿಂದ ಸರ್ಕಾರದ ಗಮನವನ್ನು ಸೆಳೆದರೆ ಈ ಸದನದಲ್ಲಿ ಆಶ್ವಾಸನೆಗಳ ಪೂರವೇ ಕೊಡುತ್ತಾರೆ. ಕಾನೂನು ಮಂತ್ರಿಗಳು, ಕಂದಾಯ ಮಂತ್ರಿಗಳು ಹೇಳಿದರು, ಗ್ರಾಮ ಸಹಾಯಕರಿಗೆ ನಾವು ಸಹಾಯವನ್ನು ಮಾಡುತ್ತೇವೆ. ಅವರ ಬೇಡಿಕೆಗಳನ್ನು ನಾವು ಈಡೇರಿಸುತ್ತೇವೆ. ಆಮೇಲೆ ಗ್ರಾಮ ಪಂಚಾಯಿತಿ ನೌಕರರುಗಳನ್ನು ಖಾಯಂ ಮಾಡುವ ಬಗ್ಗೆ ಗಲಾಟೆಯಾಯಿತು. ಆಗ ಗ್ರಾಮಪಂಚಾಯಿತಿ ನೌಕರರು ಇಲ್ಲಿ ಧರಣಿ ನಡೆಸಿದರು. ಆಗ ಮತ್ತೆ ನಾವು ಸದನಕ್ಕೆ ಬಂದಜು ಕೇಳಿದೆವು. ಇಲ್ಲಾ ನಾವು ಖಂಡಿತವಾಗಿ ಈ ಬಾರಿ ಮಾಡುತ್ತೇವೆ ಎಂದು ಹೇಳಿ ಇಂದಿಗೆ ನಾಲ್ಕು ವರ್ಷಗಳು ಮುಗಿದು ಐದನೇ ವರ್ಷಕ್ಕೆ ನಾವು ಕಾಲಿಡುತ್ತಿದ್ದೇನೆ. ಇವತ್ತು ಗ್ರಾಮಪಂಚಾಯಿತಿ ನೌಕರರ ಯಾವುದೇ ಖಾಯಂ ಬಗ್ಗೆ ಗ್ರಾಮ ಸಹಾಯಕರ ಬಗ್ಗೆಯಾಗಲಿ, ಅಂಗನವಾಡಿ ಕಾರಯಕರ್ತೆಯರ ಬಗ್ಗೆಯಾಗಲಿ, ಸರ್ಕಾರದವರು ಅವರ ಬಗ್ಗೆ ಏನು ಕಾಣಿಕೆಯನ್ನು ನೀಡಿದ್ದೀರಿ ಅವರ ಹೋರಾಟಕ್ಕೆ ಏನು ಪ್ರತಿ ಫಲವನ್ನು ನೀಡಿದ್ದೀರಿ? ಅವರ ಕರುಣಾಜನಕವಾದ ಪರಿಸ್ಥಿತಿಗೆ ಒಂದಿಷ್ಟು ಗಮನವನ್ನು ಹರಿಸಲಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಇನ್ನು ಕಳೆದ ಆಕ್ಟೋಬರ್ ಅಧಿವೇಶನದಲ್ಲಿ ನಾನು ಪ್ರಸ್ತಾವನೆಯನ್ನು ಮಾಡಿದ್ದೆ. ಅನೇಕ ಜನರು ಪ್ರಸ್ತಾವನೆಯನ್ನು ಮಾಡಿದ್ದರು. ದಕ್ಷಿಣ ಕನ್ನಡ ಜಲ್ಲೆ. ಉಡುಪಿ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಉದ್ದಕ್ಕೂ ಕೂಡ ಮೀನುಗಾರಿಕಾ ಕ್ಷಾಮ ಉದ್ಭವವಾಗಿದೆ. ಈ ಮೀನುಗಾರಿಕಾ ಕ್ಷಾಮದಿಂದ ರಾಜ್ಯದ 300 ಕಿ.ಮೀ. ಉದ್ದ ಇರತಕ್ಕಂತಹ ಸುಮಾರು ಮೂರು ಲಕ್ಷ ಮೀನುಗಾರರು ಇದರಿಂದ ಕಂಗೆಟ್ಟಿದ್ದಾರೆ. ತಾವು ಇದಕ್ಕೆ ಏನಾದರೂ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿದೆ. ಕಳೆದ ಅಧಿವೇಶನದಲ್ಲಿ ನಮ್ಮ ಮೀನುಗಾರಿಕಾ ಮಂತ್ರಿಗಳು ಇದಕ್ಕೆ

ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದರು. ಮೀನುಗಾರರ ಬೇಡಿಕೆ ಏನು ಇದೆ ಅದನ್ನು ಸಂಪೂರ್ಣವಾಗಿ ಈಡೇರಿಸುತ್ತೇವೆಂದು ಹೇಳಿದರು. ಆದರೆ ಅವರ ಬೇಡಿಕೆಯೂ ಬೇಡಿಕೆಯಾಗಿಯೇ ಉಳಿಯಿತು. ನಮ್ಮ ಮೀನುಗಾರಿಕಾ ಋತು ಸೆಪ್ಟೆಂಬರ್ ತಿಂಗಳಿನಲ್ಲಿ ಪ್ರಾರಂಭವಾಗುತ್ತದೆ. ಇವತ್ತು ಸೆಪ್ಟೆಂಬರ್‌ನಿಂದ ಅಕ್ಟೋಬರ್‌ವರೆಗೆ ಒಟ್ಟು ಮೂರು ತಿಂಗಳು ಕಾಲಾವಧಿಯಲ್ಲಿ ನಾವು ಮತ್ತೆ ಕ್ಷಾಮವನ್ನು ಅಪೇಕ್ಷಿಸುವುದಕ್ಕೆ ಆಗುವುದಿಲ್ಲ. ಇನ್ನು ಮೂರು ತಿಂಗಳ ಅವಧಿಯನ್ನು ನಾವು ನೋಡಿದರೆ ಖಂಡಿತವಾಗಿಯೂ ಅದರ ಬಗ್ಗೆ ನಿರ್ಧಾರಕ್ಕೆ ಬರಬಹುದು ಎಂಬ ಮಾತನ್ನು ಹೇಳಿದರೂ ಕೂಡ ನಾವು ಸಂದರ್ಭಕ್ಕೆ ಸರಿಯಾಗಿ ಹಂತಹಂತವಾಗಿ ಯಾವ ಯಾವ ರೀತಿಯಾಗಿ ಮೀನುಗಾರಿಕಾ ಉದ್ಯಮ ಬರುತ್ತಿದೆ ಎನ್ನುವುದನ್ನು ನಾವು ಆಗಿಂದ್ದಾಗ್ಗೆ ಸರ್ಕಾರಕ್ಕೆ ಸೂಚಿಸಿದರೂ ಕೂಡ ಮೀನುಗಾರಿಕಾ ಇಲಾಖೆಯವರು ಈ ಬಗ್ಗೆ ಯಾವುದೇ ರೀತಿಯಲ್ಲಿ ಸರ್ಕಾರದವರು ಸ್ಪಂದಿಸದೆ ಮೀನುಗಾರರು ಸಂಕಷ್ಟದಲ್ಲಿ ಬಳಲುತ್ತಿರುವುದನ್ನು ನೋಡಿಯೂ ನೋಡದಿದ್ದ

12.10 ಪಿ.ಎಂ.

ಹಾಗೆ ಮಾಡಿ ಕಣ್ಣೆದ್ದು ಕುರುಡರಾಗಿ ಕುಳಿತುಕೊಂಡಿದ್ದಾರೆ. ಇವತ್ತು ಆರು ಸಾವಿರ ಯಾಂತ್ರೀಕೃತ ದೋಣಿಗಳು ಮೀನುಗಾರಿಕೆಗೆ ಸಮುದ್ರದೊಳಗಡೆ ಹೋಗಬೇಕಾಗಿತ್ತು. ನಮ್ಮ ಇಡೀ ಕರ್ನಾಟಕ ರಾಜ್ಯದ ಕರಾವಳಿಯಲ್ಲಿ ಕರಾವಳಿಯ ಉದ್ದಕ್ಕೂ ಆರು ಸಾವಿರ ಯಾಂತ್ರೀಕೃತ ದೋಣಿಗಳಲ್ಲಿ ನಾಲ್ಕು ಸಾವಿರ ದೋಣಿಗಳು ದಡ ಸೇರಿವೆ. ಏಕೆಂದರೆ ಅವರು ಮೀನುಗಾರಿಕೆಗೆ ಹೋದರೆ ಅಲ್ಲಿ ಅವರಿಗೆ ಆದಾಯ ಬರುವುದಿಲ್ಲ. ಒಬ್ಬ ಯಾಂತ್ರೀಕೃತ ದೋಣಿಯಲ್ಲಿ ಮೀನುಗಾರಿಕೆಗೆ ಹೋಗಬೇಕಾದರೆ ಅವನು ಪ್ರತಿದಿನ ಬಳಸತಕ್ಕ ಡೀಸಲ್ ಬೆಲೆ ಹೆಚ್ಚಾಗಿದೆ. ಡೀಸಲ್‌ನ ಮಾರಾಟ ದರ 11.30 ಪೈಸೆಯಾಗಿದೆ. ಡೀಸಲ್‌ನ ಮೂಲ ಬೆಲೆ ಇರುವುದು 7.08 ಪೈಸೆ. ಅದಕ್ಕೆ ಕೇಂದ್ರ ಸರ್ಕಾರದವರು ಒಂದು ರೂಪಾಯಿ ಸ್ಪೆಷಲ್ ಡ್ಯೂಟಿ ಹಾಕಿದರು, ಅದರಿಂದ ಮತ್ತಷ್ಟು ಬೆಲೆ ನಮಗೆ ಹೆಚ್ಚಾಯಿತು. ಅಬಕಾರಿ ಸುಂಕ 1.16 ಪೈಸೆ ಬೇಳುತ್ತದೆ. ಮಾರಾಟ ತೆರಿಗೆ 1.64 ಪೈಸೆ ಶೇಕಡ 20 ರಷ್ಟು ಮಾರಾಟ ತೆರಿಗೆ ಬೀಳುತ್ತದೆ. ಇವತ್ತೇನು ಡೀಸಲ್ ಬೆಲೆ 11.30 ಪೈಸೆ ಇದೆ. ಇದರ ಪ್ರಕಾರ ಡೀಪ್ ಸೀ ಟ್ರಾಲರ್ ಬೋಟ್‌ಗಳಿಗೆ ಒಂದು ವರ್ಷಕ್ಕೆ 50 ಸಾವಿರ ಲೀಟರ್ ಡೀಸಲ್ ಬಳಕೆಯಾಗುತ್ತದೆ. 50 ಸಾವಿರ ಲೀಟರ್ ಡೀಸಲ್ ಬಳಕೆಯಾಗುವಾಗ ಒಬ್ಬ ಡೀಪ್ ಸೀ ಟ್ರಾಲರ್ ಬೋಟ್‌ನವ ಕೇಂದ್ರ ಅಬಕಾರಿ ಸುಂಕವನ್ನು 1 ಲಕ್ಷದ 7 ಸಾವಿರ ರೂಪಾಯಿ ಪಾವತಿ ಮಾಡುತ್ತಾರೆ. ರಾಜ್ಯಕ್ಕೆ ಮಾರಾಟ ತೆರಿಗೆ ರೂಪದಲ್ಲಿ 82 ಸಾವಿರ ರೂಪಾಯಿ ಪಾವತಿ ಮಾಡುತ್ತಾನೆ. ಅದರಲ್ಲಿ ಪರ್ಸೀನ್ ಬೋಟ್‌ಗಳಿಗೆ ವರ್ಷ ಒಂದಕ್ಕೆ ಒಂದು ಪರ್ಸೀನ್ ಬೋಟ್‌ಗೆ 45 ಸಾವಿರ ಲೀಟರ್ ಡೀಸಲ್ ಮಿನಿಮಮ್ ಬೇಕಾಗುತ್ತದೆ. 45 ಸಾವಿರ ಲೀಟರ್

ಡೀಸಲ್ ಒಬ್ಬ ಪರ್ಸೀನ್ ದೋಣಿ ಮಾಲೀಕ ಬಳಕೆ ಮಾಡುವಾಗ ಆತ ಕೇಂದ್ರ ಅಬಕಾರಿ ಸುಂಕ 96ಸಾವಿರ ಕೇಂದ್ರಕ್ಕೆ ಸಲ್ಲಿಸಿದರೆ ರಾಜ್ಯಕ್ಕೆ ಮಾರಾಟ ತೆರಿಗೆ ರೂಪದಲ್ಲಿ 73,800 ರೂಪಾಯಿಗಳನ್ನು ಕೊಡುತ್ತಿದ್ದಾನೆ. ಸಣ್ಣ ಮೀನುಗಾರಿಕೆ ಮಾಡುವ ದೋಣಿಗಳು, 35 ಅಡಿ ಸಣ್ಣ ದೋಣಿಗಳು ಇವೆ. ಅವರು 48,800 ರೂಪಾಯಿ ಕೇಂದ್ರ ಅಬಕಾರಿ ಸುಂಕವನ್ನು ಕೊಟ್ಟರೆ ರಾಜ್ಯಕ್ಕೆ ಮಾರಾಟ ತೆರಿಗೆ ರೂಪದಲ್ಲಿ 32,800 ರೂಪಾಯಿಗಳನ್ನು ಕೊಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುವುದೇನೆಂದರೆ, ಇಂತಹ ಪ್ರಮುಖವಾದ ವಿಷಯಗಳನ್ನು ಹೇಳುವಾಗ ಸಂಬಂಧಪಟ್ಟ ಮಂತ್ರಿಗಳು ಅಥವಾ ಬೇರೆ ಯಾರಾದರೂ ಬರೆದುಕೊಂಡು ಕೊನೆಗೆ ಉತ್ತರ ಕೊಡುವಾಗ ಇದು ಆಗುತ್ತದೆ ಅಥವಾ ಇಲ್ಲ ಎಂಬುದನ್ನು ಹೇಳಬೇಕಾಗುತ್ತದೆ. ಸೇಲ್ಸ್‌ಟ್ಯಾಕ್ಸ್ ಸಬ್ಸಿಡಿ, ಮೀನುಗಾರರ ಸಮಸ್ಯೆಯನ್ನು ಬಗೆಹರಿಸತಕ್ಕ ಬಗ್ಗೆ ಕೇಳುವವರು ಹಾಗೂ ಬರೆದುಕೊಳ್ಳುವವರು ಬೇಕು. ಯಾರಾದರು ಒಬ್ಬರು ಆ ಕೆಲಸ ಮಾಡಬೇಕು.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ) :— ಹಾಗೆ ಬರೆದುಕೊಂಡಿಲ್ಲ ಎಂದು ತಿಳಿದುಕೊಳ್ಳಬೇಡಿ. ಉತ್ತರ ಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ತಾವು ಉತ್ತರ ಕೊಡುತ್ತೀರಿ ಬರೆದುಕೊಂಡು ಅದು ನಮಗೆ ಗೊತ್ತಿದೆ. ತಾವು ಉತ್ತರವನ್ನು ಯಾವ ಧಾಟಿಯಲ್ಲಿ ಕೊಡುತ್ತೀರಿ ಎಂಬುದು ಅದು ನನಗೆ ಗೊತ್ತಿದೆ. ಹಾಗಾದರೆ ಹೇಗೆ, ಬಹಳ ಲಘುವಾಗಿ ತಿಳಿದುಕೊಳ್ಳಬೇಡಿ. ಸಂಬಂಧಪಟ್ಟ ಮಂತ್ರಿಗಳು ಇಲ್ಲಿದ್ದು ಬರೆದುಕೊಳ್ಳವುದಕ್ಕೆ ಏನಾಗುತ್ತದೆ? 50 ಜನ ಮಂತ್ರಿಗಳನ್ನು ಮಾಡಿದ್ದೀರಿ ಅವರು ಇಲ್ಲಿ ಕೂಡುವುದಕ್ಕೆ ಏನಾಗುತ್ತದೆ?

MR. SPEAKER: We co-operate with you becuase you are the Leader and I don't insist on your presence all the way. ಕಳೆದ ಸಲ ಇಲ್ಲಿ ಒಂದು ಸಲ ಮಾತನಾಡುವಾಗ ಮಾನ್ಯ ಸಭಾಪತಿಯವರು made a serious allegations against Muzrai Department. The Minister concerned was not present in the House. I did bring it to the notice of the ruling party, ನೋಡ್ರಿ ಅಪ್ಪ ನಿಮ್ಮ ಕಡೆಯಿಂದ ಯಾರಾದರೂ ಡಿಫೆಂಡ್ ಮಾಡಿಕೊಳ್ಳುವ ಹಾಗೆ ಇದ್ದರೆ ಮಾಡಿಕೊಳ್ಳಿಯೆಂದೆ, ಅವರು ನಿಮ್ಮ ಗಮನಕ್ಕೂ ತರಲಿಲ್ಲ, ಅವರೂ ಡಿಫೆಂಡ್ ಮಾಡಿಕೊಳ್ಳಲಿಲ್ಲ. The allegations have gone on record. ತಾವು ನೋಟ್ ಮಾಡಿಕೊಳ್ಳುತ್ತೇನೆಂದು ಹೇಳಿದ್ದೀರಿ, it is only to freshen your memory these things are happening. I have been doing my duty as a Presiding

Officer by bringing these things to the notice of the Treasury Benches from time to time. This has not happened once; it has happened several times.

ಶ್ರೀ ಜೆ.ಹೆಚ್. ಪಟೇಲ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಸಂಬಂಧಪಟ್ಟ ಮಂತ್ರಿಗಳು ಇಲ್ಲವೆಂದು ಹೇಳಿದ್ದುದು ಸರಿ. ಆದರೆ ಅವರು ಹೇಳಿದ ವಿಷಯ ಅದು ನೋಟ್ ಆಗುತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೋಟ್ ಮಾಡಿ ರೆಕಾರ್ಡ್ ಮಾಡಿಕೊಂಡು ತೆಗೆದುಕೊಂಡು ಹೋಗುತ್ತೀರಾ?

ಅಧ್ಯಕ್ಷರು :— ನಾನು ನಿಮ್ಮ ಹಿತದೃಷ್ಟಿಯಿಂದ ಹೇಳಿದೆ ಅಷ್ಟೆ. Now I am clear. I am happy.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ತಾವು ಇದ್ದೀರಿ ಈಗ ಅದು ಸರಿ. ನಾನು ಏಕೆ ಹೇಳುತ್ತೇನೆಂದರೆ ತಾವು ಹಿಂದೆ ನೋಡಿ ಕುರ್ಚಿಗಳಲ್ಲಿ ಎಷ್ಟ ಜನರಿದ್ದಾರೆ ಎಂದು.

ಶ್ರೀ ಜೆ.ಹೆಚ್. ಪಟೇಲ್ :— ಅವರು ಎಲಗ್ಲಿ ಹೋಗಿದ್ದಾರೆಂದರೆ, ನಿಮ್ಮ ಹಿಂದೆ ಖಾಲಿ ಇವೆಯಲ್ಲಾ ಕುರ್ಚಿಗಳು ಅವರು ಅವರ ಜೊತೆಗೆ ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮಗೆ ಜವಾಬ್ದಾರಿ ಇದೆ. ಜನ ಜವಾಬ್ದಾರಿಯನ್ನು ಕೊಟ್ಟು ಕುರ್ಚಿಯ ಮೇಲೆ ಕೂರಿಸಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ :— ಅವರಿಗೆ ಜವಾಬ್ದಾರಿ ಇಲ್ಲವಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಮುಂಜಾನೆ ಕುರ್ಚಿಯಲ್ಲಿ ಕೂತರೆ ಸಾಯಂಕಾಲದವರೆಗೆ ಎಲ್ಲೂ ಹೋಗುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ :— ನಾನೂ ಅಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ತಾವಾದರೂ ಮಧ್ಯ ಮಧ್ಯದಲ್ಲಿ ಹೋಗಿ ಮಲಗಿ ಬರುತ್ತೀರಿ.

ಶ್ರೀ ಜೆ.ಹೆಚ್. ಪಟೇಲ್ :—ನಾನು ಅಲ್ಲಿದ್ದಾಗಲೂ ನಿಮ್ಮ ದರ್ಶನ, ನಿಮ್ಮ ವಾಣಿ ಕೇಳುತ್ತಿರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಹೇಳುವುದೇನೆಂದರೆ ಕೊನೆಯ ಪಕ್ಷ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುವಾಗ ಮಂತ್ರಿಗಳು ಇರಬೇಕು.

ಅಧ್ಯಕ್ಷರು :— ಮಲಗಿರುವಾಗ ಅವರನ್ನು ನೆನಸಿಕೊಳ್ಳುವುದು ಬೇಡ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅವರು ಮಲಗಿದ್ದಾಗ ನನಗೆ ಏಕೆ ನೆನಸಿಕೊಳ್ಳುತ್ತಾರೆ. ನೀವು ಚೆನ್ನಾಗಿ ಹೇಳುತ್ತೀರಿ, ಅವರು ನಮಗೆ ಏಕೆ ನೆನಸಿಕೊಳ್ಳುತ್ತಾರೆ?

ಅಧ್ಯಕ್ಷರು :— ನನಗೆ ಒಂದು ಕನ್‌ಫ್ಯೂಷನ್ ಬಂತು. Now I am cleared. Happy.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನನಗೆ ಏಕೆ ನೆನಸಿಕೊಳ್ಳುತ್ತಾರೆ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಾರ್ತಾ ಸಚಿವರು) :— ನೀವು ಮಾಡೋದು ಮಾಡಿ ನನಗೆ ಏಕೆ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು :— ಹಾಗೇನೂ ಇಲ್ಲ. ನನಗೆ ಯಾರ ನೆನಪು ಬರುವುದಿಲ್ಲ. ಬಹಳ ಚೆನ್ನಾಗಿ ಗೊರಕೆ ಹೊಡೆದುಕೊಂಡು ಮಲಗಿರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮುಖ್ಯಮಂತ್ರಿಗಳು ನಿಮ್ಮನ್ನೂ ನೆನಸಿಕೊಳ್ಳುವುದಿಲ್ಲ, ನನ್ನನ್ನೂ ನೆನಸಿಕೊಳ್ಳುವುದಿಲ್ಲ ಅದು ಬೇರೆ. ನಾನು ಹೇಳುವುದೇನೆಂದರೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುವಾಗ ಸಂಬಂಧಪಟ್ಟ ಮಂತ್ರಿಗಳು ಕೂತಿ ಬರೆದುಕೊಂಡು ನನಗೆ ಉತ್ತರ ಕೊಡಬೇಕು. ತಮಗೆ ಫೀಡ್ ಮಾಡಲಿ ತಾವಾದರೂ ಉತ್ತರ ಹೇಳಿ. ಇಲ್ಲಿ ಪ್ರಸ್ತಾಪ ಮಾಡಿದರೆ ಏನಾದರೂ ಒಂದು ರಿಲೀಫ್ ಸಿಗುತ್ತದೆಂದು ಅಷ್ಟೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೆ, ತಾವು ಒಂದು ಮಾತು ಹೇಳಿದಿರಿ. ಕಳೆದಜ ಅಧಿವೇಶನದಲ್ಲಿ ಅವಿಶ್ವಾಸ ಠರಾವನ್ನು ಮಂಡಿಸಿದಾಗ ನಾವು ಮೀನುಗಾರಿಕೆಯ ಕ್ಷಾಮದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಮೀನುಗಾರಿಕೆ ಕ್ಷಾಮ ಹೇಗೆ ಬಂತು, ಹೇಗಾಯಿತು ಎಂದು ವಿವರವಾಗಿ ನಾನು ಇಲ್ಲಿ ಮಾತನಾಡುವಾಗ ಮಾನ್ಯ ಬೈರೇಗೌಡರು...

ಶ್ರೀ ಜಿ.ಹೆಚ್ ಪಟೇಲ್ :— ಅವೊತ್ತು ತಾವು ಹೇಳಿದ್ದು ಬಡ ಮೀನುಗಾರರಿಗೆ ಅಪಾಯ ಇರುವುದು ಡೀಸಲ್‌ನಿಂದಲ್ಲ. ಡೀಸಲ್ ರೇಟ್ ಜಾಸ್ತಿಯಾದದ್ದಿರಿಂದ ಅಲ್ಲ. ಡೀಪ್ ಸೀ ಫಿಷಿಂಗ್‌ನಿಂದ ಯಾರ ಪರ್ಮಿಷನ್ ಇಲ್ಲದೆ ವಿದೇಶದವರು ಒಳ್ಳೆಯ ಮೀನು ಸಿಗುತ್ತದೆಂದು ಹಿಡಿದುಕೊಂಡು ಹೋಗುತ್ತಾರೆ. ಅವರಿಂದ ಅವರಿಗೆ ಇರುವುದು

ಅಪಾಯ. ನಾವು ಈ ಬಗ್ಗೆ ಕ್ರೇಂದ್ರ ಸರ್ಕಾರದವರಿಗೆ ಬರೆದಿದ್ದೇವೆ. ಈ ರೀತಿ ಅವರಿಗೆ ಪರ್ಮಿಷನ್ ಕೊಡಬಾರದೆಂದು. ಇನ್ನು ಅವರಿಂದ ಉತ್ತರ ಬಂದಿಲ್ಲ. ನಾನು ಈ ಮಾತನ್ನು ಅವೊತ್ತೇ ಹೇಳಿದ್ದೇನೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೆ, ನನ್ನ ಪ್ರಸ್ತಾವ ಅದಲ್ಲ. ಅವೊತ್ತು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುತ್ತೇವೆಂದು ಬರೆದು ಮುಖ್ಯಮಂತ್ರಿಗಳು ಹೇಗಿದಾಹಾಗೆ ಡೀಪ್ ಸೀ ಫಿಷಿಂಗ್ ಮಾಡುವುದನ್ನು ನಿಲ್ಲಿಸಬೇಕೆಂದು ನಾವು ಆ ದಿವಸವೇ ಕೇಳಿದ್ದೇವೆ. ಕರ್ನಾಟಕದ ಕರಾವಳಿಯಲ್ಲಿ ವಿದೇಶಿ ಮೀನುಗಾರರನ್ನು ಬಿಡಬಾರದು ಎಂದು. ನಮ್ಮದು ಕರ್ನಾಟಕ ಕರಾವಳಿ ಪ್ರದೇಶ ಇದೆ. ಕೇರಳದಲ್ಲಿ ಇದೇ ರೀತಿ ವ್ಯತ್ಯಾಸವಾದಾಗ ಕೇರಳದ ಜನ ಅವರೇ ಆ ದೋಣಿಗಳನ್ನು ನಿಲ್ಲಿಸಲು ಹೋಗಿ ಆಗ ಅಧಿಕಾರಿಗಳು ಮಧ್ಯಸ್ತಿಕೆ ವಹಿಸಿ ಕೇರಳದ ಗಡಿ ಪ್ರದೇಶದೊಳಗೆ ವಿದೇಶದವರು ಮೀನುಗಾರಿಕೆ ಮಾಡುತ್ತಿಲ್ಲ. ಅದು ಬಿಡಿ. ವಿದೇಶಿ ಮೀನುಗಾರರು ಏನು ಮಾಡತಕ್ಕದು ಅದೇನಿದ್ದರೂ ಕೂಡ ಇವತ್ತು ಸಂದಿಗ್ಧತೆಯಲ್ಲಿರತಕ್ಕ ಮೀನುಗಾರಿಕೆ ಯಾವ ರೀತಿ ಪ್ರೋತ್ಸಾಹವನ್ನು ಕೊಡುತ್ತೀರಿ? ಅದಕ್ಕಾಗಿ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ವಿತ್ತ ಮಂತ್ರಿಗಳನ್ನು ಕೇಳಿದೆ. ಯಾಂತ್ರೀಕೃತ ದೋಣಿಗಳಿಗೆ ಬಳಸತಕ್ಕ ಡೀಸಲ್‌ಏನಿದೆ ಅದರ ಮೇಲಿರತಕ್ಕ ಮಾರಾಟ ತೆರಿಗೆಯನ್ನು ಏಕೆ ರದ್ದು ಮಾಡಬೇಕೆಂದು ಹೇಳಿದ್ದೇನೆಂದರೆ, ಡೀಪ್ ಸೀ ಟ್ರಾಲರ್ ಬೋಟ್‌ಗಳು ವರ್ಷ ಒಂದಕ್ಕೆ 82 ಸಾವಿರ ರೂಪಾಯಿ ಮಾರಾಟ ತೆರಿಗೆ ಕೊಟ್ಟರೆ ನಮ್ಮ ಸರ್ಕಾರ ನಮಗೆ ಕೊಡತಕ್ಕ ಸಹಾಯಧನ 9 ಸಾವಿರ ರೂಪಾಯಿ. 82 ಸಾವಿರ ರೂಪಾಯಿ ಮಾರಟ ತೆರಿಗೆಯನ್ನು ಕೊಡುವಾಗ 9 ಸಾವಿರ ರೂಪಾಯಿ ಸಹಾಯಧನದಿಂದ ನಮ್ಮ ಮೀನುಗಾರರಿಗೆ ಏನು ಲಾಭವಾಗುತ್ತದೆ? 73ಸಾವಿರ ರೂಪಯಿ ಮಾರಾಟ ತೆರಿಗೆಯನ್ನು ಕೊಡತಕ್ಕ ಪರ್ಸಿನ್ ಬೋಡ್‌ಗಳಿಗೆ 15 ವರ್ಷಗಳ ಹಿಂದೆ ಮಾಡಿಕೊಂಡಿದ್ದ ನಿಯಮದಂತೆ ಮೂರು ಸಾವಿರ ರೂಪಾಯಿಗಳಿಂದ ಏನು ಲಾಭವಾಗುತ್ತದೆ? ನೀವು ಕೊಡುವ ಸಹಾಯಧನದಿಂದ ನಮಗೇನೂ ಲಾಭವಾಗುತ್ತಿಲ್ಲ. ಇವತ್ತು ತೀವ್ರವಾದ ಮತ್ಸ್ಯ ಕ್ಷಾಮವನ್ನು ಎದುರಿಸುತ್ತಿರುವಾಗ ಈ ವರ್ಷದ ಮತ್ತು ಮುಂದಿನ ಆರ್ಥಿಕ ವರ್ಷದಲ್ಲಿ ಡೀಸಲ್ ಮೇಲಿನ ಮಾರಾಟ ತೆರಿಗೆಯನ್ನು ರದ್ದು ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಸಹಾಯಧನವನ್ನು ಜುಜುಬಿ ಮೊತ್ತದಷ್ಟು ಹೆಚ್ಚಿಸಿ ನಾವು ಸಹಾಯ ಮಾಡಿದ್ದೇವೆಂದು ಹೇಳಿದರೆ ಪರಿಣಾಮ ಬೀರಲಿಕ್ಕೆ ಇಲ್ಲ.

ಶ್ರೀ ಎನ್. ಯೋಗೀಶ್ ಭಟ್ :— ಒಂದು ನಿಮಿಷ ಯಿಲ್ಡ್ ಆಗಬೇಕು. ಮಾನ್ಯ ಸಭಾಪತಿಯವರು ಈಗಾಗಲೇ ಲೆಕ್ಕಾಚಾರ ಸಿಕ್ಕಿದ ಪ್ರಕಾರ ಪರ್ಸಿನ್ ದೋಣಿಗಳಿಗೆ ಇಷ್ಟರತನಕ ಆದಾಯ ಎಷ್ಟು ಬಂದಿದೆ ಅಂದರೆ, ಮಾನ್ಯ ಸದಸ್ಯರು ಹೇಳಿದ್ದಕ್ಕೆ

ಪೂರಕವಾಗಿ 9 ಲಕ್ಷದ 28 ಸಾವಿರ. ಖರ್ಚು 10 ಲಕ್ಷದ 10 ಸಾವಿರ. 81 ಸಾವಿರ ಒಂದು ತಿಂಗಳಿಗೆ ಮೈನಸ್ ಆಗುತ್ತಿದೆ. ಅದೇ ರೀತಿ ಡೀಪ್ ಸೀ ಟ್ರಾಲರ್ ಬೋಟ್‌ಗಳಿಗೆ 3 ಲಕ್ಷದ ಒಂದು ಸಾವಿರ ಆದಾಯ ಬಂದರೆ, 4 ಲಕ್ಷದ 75 ಸಾವಿರ ನಷ್ಟವಾಗುತ್ತದೆ. ಸಣ್ಣ ದೋಣಿಗಳಲ್ಲಿ ಒಂದು ಲಕ್ಷದ 66ಸಾವಿರ ಆದಾಯ ಬಂದರೆ ಸುಮಾರು 76 ಸಾವಿರದಷ್ಟು ನಷ್ಟವಾಗುತ್ತಿದೆ. ಡೀಸಲ್ ಮಾರಾಟ ತೆರಿಗೆಯನ್ನು ರದ್ದು ಮಾಡುವುದು ಇದಕ್ಕೆ ಒದೇ ಪರಿಹಾರ. ಮತ್ತೆ . ಬ್ಯಾಂಕುಗಳ ಸಾಲದ ಬಡ್ಡಿಯನ್ನು ಮನ್ನಾ ಮಾಡಬೇಕು. ಸಾಲದ ಅವಧಿಯನ್ನು ಒಂದು ವರ್ಷದ ತನಕ ಕೊಡಬೇಕು. ವಜಾ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೆ, ಪರ್ಸಿನ್ ಬೋಟ್‌ಗಳಿಗೆ ಒಂದು ವರ್ಷಕ್ಕೆ ಒಂದು ಸಾರಿ ಇನ್ಸೂರೆನ್ಸ್ ನಾವು ಕಟ್ಟಬೇಕು. ಅದಕ್ಕೆ ಇನ್ಸೂರೆನ್ಸ್ ಪ್ರೀಮಿಯಂ ಒಂದು ಪರ್ಸಿನ್ ಬೋಟ್‌ಗೆ 30 ಸಾವಿರ ರೂಪಾಯಿಗಳನ್ನು ಕೊಡಬೇಕು. ಡೀಪ್‌ಸೀ ಬೋಟ್‌ಗಳಿಗೆ ಕೂಡ 30 ಸಾವಿರ ರೂಪಾಯಿಗಳು ಮತ್ತು ಸಣ್ಣ ಬೋಟುಗಳಿಗೆ 9 ಸಾವಿರ ರೂಪಾಯಿ ಪ್ರೀಮಿಯಂನ್ನು ನಾವು ಕೊಡಬೇಕು. ಎಲ್ಲಿಂದ ಕೊಡುವುದು ನಾವು? ಒಂದು ಕಡೆಯಿಂದ ರಾಷ್ಟ್ರೀಕೃತ ಬ್ಯಾಂಕು, ಆರ್ಥಿಕ ಸಂಸ್ಥೆಗಳಿಂದ ಮಾಡಿರಕತ್ತಂಥ ಸಾಲದ ಮರುಪಾವತಿ ಮಾಡುವುದಾ? ಅವರ ಬಡ್ಡಿ ಕಟ್ಟಲಾರದೆ ನಾವು ಅಥವಾ ಈಗಾ ಮಾನ್ಯ ಯೋಗೀಶ್ ಭಟ್ ಅವರು ಏನು ಹೇಳಿದರು ಆದಾಯ ಎಷ್ಟು ಬರುತ್ತದೆ ಎಷ್ಟು ಖರ್ಚು ಆಗುತ್ತದೆ ಎಂದು. ಆದಾಯ ಬರುವುದು 67,300 ರಾಪಯಿಗಳಆದರೆ ನಮಗೆ ಖರ್ಚು ಒಂದು ಲಕ್ಷ 33 ಸಾವಿರ ಬಂದರೆ ನಾವು ಕಟ್ಟುವುದಾರೂ ಹೇಗೆ? ಪರ್ಸಿನ್‌ನಲ್ಲಿ 10 ಲಕ್ಷ 30 ಸಾವಿರ ರೂಪಾಯಿ ಆದಾಯ ಅಂದರೆ 9 ಲಕ್ಷ 15 ಸಾವಿರ ಖರ್ಚು ಬಂದರೆ ಈ ಪರ್ಸಿನ್ ಬೋಟುಗಳಲ್ಲಿ ಮಾತ್ರ ಸ್ವಲ್ಪ ಅಂದರೆ ಸುಮಾರು 60 ಸಾವಿರ ರೂಪಾಯಿ ಆದಾಯ ಕಂಡರೆ ನಾವು ಯಾವ ರೀತಿ ಡೀಸಲ್ ತುಂಬಿಸಿಕೊಳ್ಳುವುದು ಅಥವಾ ಯಾವ ರೀತಿ ಸಾಲ ಮರುಪಾವತಿ ಮಾಡುವುದು? ಯಾವ ರೀತಿ ಸಾಲದ ಬಡ್ಡಿ ಕಟ್ಟುವುದು ಹೇಳಿ. ಈ ಪ್ರಶ್ನೆಯನ್ನು ನಾನು ನಿಮ್ಮ ಮುಂದಿಡಬಯಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಕಳೆದ ವರ್ಷ ನಮ್ಮ ಮೀನುಗಾರಿಕೆ ಸಂಪಾದನೆ 68 ಕೋಟಿ ರೂಪಾಯಿಗಳಷ್ಟು ಆಗಿದ್ದರೆ, ಈ ವರ್ಷ ನಮ್ಮ ಮೀನುಗಾರಿಕೆ ಇಲಾಖೆಯವರು ಕೊಟ್ಟ ರೀತಿಯಲ್ಲಿ ಕೇವಲ 28 ಕೋಟಿ ರೂಪಾಯಿಗಳಷ್ಟು ಆದಾಯವಾಗಿದೆ. ಕಳೆದ ವರ್ಷ 68 ಕೋಟಿ ರೂಪಾಯಿ ಆದಾಯ ಆಗಿದ್ದರೆ ಅದರಲ್ಲೂ ಕಳೆದ ವರ್ಷ ವಿಶೇಷವಾಗಿ ನಮ್ಮಲ್ಲಿ cuttle fish ಎಂದು ಬರುತ್ತದೆ ಬಂಡಸೆ ಮೀನು. ಅದನ್ನು ಕರ್ನಾಟಕದವರು ಯಾರೂ ತಿನ್ನುವುದಿಲ್ಲ ಅದನ್ನು 100 ಪರ್ಸೆಂಟ್ ಎಕ್ಸ್‌ಪೋರ್ಟ್ ಮಾಡುತ್ತೇವೆ. ಅದರಲ್ಲೂ ಕೂಡ ರಾಣಿ ಮೀನು -Pink Perch ಎಂದು ಹೇಳಿ ಒಂದು ಬರುತ್ತದೆ. ಅದನ್ನು ಕೂಡ ನಾವು

ಶೇಕಡ ನೂರರಷ್ಟು ಎಕ್ಸಪೋರ್ಟ್ ಮಾಡುತ್ತೇವೆ. ಇವತ್ತು ಐರೋಪ್ಯ ದೇಶಗಳು ಈ ಪರಿಸರ ಮಾಲಿನ್ಯ ಶುಚಿತ್ವದ ಶರತ್ತುಗಳ ಮೂಲಕ ನಮ್ಮ ಕರ್ನಾಟಕದಲ್ಲಿ ಇಡೀ ಭಾರತ ದೇಶದಲ್ಲಿ ಇರತಕ್ಕಂಥ ಮೀನು ಸಂಸ್ಕರಣ ಘಟಕಗಳ ಮೇಲೆ ಕೆಲವು ಷರತ್ತುಗಳನ್ನು ವಿಧಿಸಿದ್ದಾರೆ. ಅವುಗಳ ಪಾಲನೆ ಆಗಬೇಕಾದರೆ ಈ ಮೀನು ಸಂಸ್ಕರಣ ಘಟಕಗಳು ಮೇಲೆ ಸುಮಾರು 5 ಕೋಟಿ ರೂಪಾಯಿ ವೆಚ್ಚಮಾಡಬೇಕಾಗುತ್ತದೆ ಇವತ್ತು ಮೀನು ಸಂಸ್ಕರಣ ಘಟಕಗಳಿಗೆ 5 ಕೋಟಿ ರೂಪಾಯಿ ವೆಚ್ಚಮಾಡಿ ಪರದೇಶಕ್ಕೆ ಕಳುಹಿಸುವ ಪರಿಸ್ಥಿತಿಯಲ್ಲಿ ನಾವು ಇಲ್ಲ. ಸರ್ಕಾರದ್ದೆ ಸುಮಾರು 9 ಮಿನು ಸಂಸ್ಕರಣ ಘಟಕಗಳು ಕರಾವಳಿ ಉದ್ದಕ್ಕೂ ಇರುವುದನ್ನು ಅವರು ಸಂಪೂರ್ಣವಾಗಿ ಮುಚ್ಚಿಬಿಟ್ಟು ಕೆಲವೊಂದು ಖಾಸಗಿಯವರಿಗೆ ಕೊಟ್ಟುಬಿಟ್ಟಿದ್ದಾರೆ. ಹೀಗಿರುವಾಗ ನಮ್ಮ ರಫ್ತು ಸಂಪೂರ್ಣವಾಗಿ ನಿಂತುಹೋಗಿದೆ. ಇವತ್ತು ಬಂಡಸೆ ಅಥವಾ ಕಟಲ್ ಫಿಶ್, ಸೀಗಡಿ, ಫ್ರಾಂಜ್ ತಿನ್ನುವುದಕ್ಕೆ ಬಹಳ ರುಚಿಯಾಗಿ ಇರುತ್ತದೆ. ಆದರೆ ಇದು ದುಬಾರಿಯಾಗಿದ್ದು ಲಾಭ ಸಿಗುವುದಿಲ್ಲ. ಈ ಬಗ್ಗೆ ಒಂದು ಟನ್ ಕೂಡ ಸಿಗದ ಪರಿಸ್ಥಿತಿ ಇದೆ. ಇವತ್ತು ಎಕ್ಸಪೋರ್ಟ್ ಓರಿಯಂಟೆಡ್ ಮೀನುಗಳು ಸಿಗದೆ ಮೇಕ್ರಾಲ್ ಏನಿದೆ, ಅದನ್ನು ಬಂಡಸೆ ಎಂದು ಹೇಳುತ್ತೇವೆ. ಅದರ ಸಂಪಾದನೆಯಲ್ಲಿ ಎಷ್ಟು ಆದಾಯ ಮಾಡಲು ಸಾಧ್ಯ? ಇದನ್ನು ಏಕೆ ಇಷ್ಟು ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ ಎಂದರೆ ಮೀನುಗಾರಿಕಾ ಇಲಾಖೆಯವರು ನಮಗೆ ಮೆಟ್ರಿಕ್ ಟನ್ ರೂಪದಲ್ಲಿ ಕೊಡುತ್ತಾರೆಯೇ ವಿನಹ, ಇಷ್ಟು ಟನ್ ಮೀನು ಉತ್ಪಾದನೆಯಾಗಿದೆ ಎಂದು ಹೇಳುತ್ತಾರೆಯೇ ಹೊರತು. ಕ್ವಾಲಿಟೇಟಿವ್ ಆಗಿ ಸ್ಟ್ಯಾಟಿಸ್ಟಿಕ್ಸ್ ಕೊಡುತ್ತಾರೆಯೇ ವಿನಹ ಕ್ವಾಂಟಿಟೇಟೀವ್ ಆಗಿ ಕೊಡುತ್ತಿಲ್ಲ. ಇವತ್ತು ಯುರೋಪ್ ದೇಶಗಳಲ್ಲಿ ಈ ಪರಿಸ್ಥಿತಿ ಆದರೆ ಚೈನಾ, ಇಂಡೋನೇಷಿಯಾದಲ್ಲಿ ಅವರ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದೆ. ಚೈನಾದಲ್ಲಿ ದೊಡ್ಡ ಪ್ರವಾಹ ಎದ್ದಿದ್ದರಿಂದಾಗಿ ಅವರು ಪರದೇಶಗಳಿಂದ ಆಮದು ಮಾಡದಿದ್ದ ಪರಿಸ್ಥಿತಿಯಲ್ಲಿ ಇದ್ದಾರೆ. ಒಂದು ವೇಳೆ ಬೇಡಿಕೆ ಬಂದರೂ ಕೂಡ ನಾವು ಕಳುಹಿಸದೇ ಇರುವ ಪರಿಸ್ಥಿತಿ ಉದ್ಭವವಾಗಿದೆ. ಇವತ್ತು ಮುಖ್ಯವಾಗಿ ರಾಣಿ ಮೀನು ಏನಿದೆ ಅದನ್ನು ಚೈನಾ ಇಂಡೋನೇಷಿಯಾ ದೇಶಗಳಿಗೆ ರಫ್ತು ಮಾಡುತಿದ್ದು, ವಾರ್ಷಿಕವಾಗಿ 180 ಕೋಟಿ ರೂಪಾಯಿ ವಿದೇಶಿ ವಿನಿಮಯ ಮಾಡತಕ್ಕಂಥ ಮೀನುಗಾರಿಕಾ ಉದ್ಯಮ ಈ ವರ್ಷ ಕೇವಲ ಒಂದೈದು ಕೋಟಿ ವಿದೇಶಿ ವಿನಿಮಯವೂ ಇಲ್ಲದೆ ಇರುವು ಪರಿಸ್ಥಿತಿಯಲ್ಲಿ ಇರುವಾಗ ಸರ್ಕಾರ ಚಿಂತನೆ ಮಾಡಬೇಕೇ ಬೇಡವೇ? ಈ ಉದ್ಯಮವನ್ನೇ ಅವಲಂಬಿಸಿಕೊಂಡಿರತಕ್ಕಂಥ ಮೂರು ಲಕ್ಷ ಮೀನುಗಾರರಿಗೆ ರಕ್ಷಣೆ ಕೊಡಬೇಕಾಗಿದೆ, ಅವರಿಗೆ ಪ್ರೋತ್ಸಾಹ ಕೊಡಬೇಕಾಗಿದೆ. ಇವರನ್ನು ಯಾವುದಾದರೂ ರೀತಿಯಲ್ಲಿ ಮೇಲಕ್ಕೆ ತರಬೇಕು. ಧೃತರ ಬಗ್ಗೆ ನಾವೆಲ್ಲರೂ ಒಟ್ಟು ಸೇರಿ ಪರಿಹಾರವನ್ನು ನಿಗದಿ ಪಡಿಸಿದ್ದೇವೆ. ಬರಗಾಲ ಬಂದಾಗ ಅವರಿಗೆ ಪರಿಹಾರ ಕೊಡಬೇಕೆಂದು ನಾವೆಲ್ಲರೂ

ಧಾವಿಸುತ್ತಾ ಇದ್ದೇವೆ. ಆದರೆ ಇವತ್ತು ಆ ಮಿನುಗಾರರ ಕುಟುಂಬಗಳು ಒಂದು ಹೊತ್ತು ಊಟ ಇಲ್ಲದೆ ಗುಡಿಸಲುಗಳಲ್ಲಿ ಮಲಗಿಕೊಂಡಿದ್ದಾರೆ. ಅವರಿಗೆ ನಾವು ಇವತ್ತು ಪರಿಹಾರ ಕೊಡುವ ಪರಿಸ್ಥಿತಿ ಇಲ್ಲ. ನಮ್ಮ ಮೀನುಗಾರಿಕೆ ಸಚಿವರು ಹೇಳಿದರು ಏನೆಂದರೆ ರೈತರಿಗೆ ಯಾವ ರೀತಿ ಪರಿಹಾರ ಕೊಡತಕ್ಕಂಥ ವಿಚಾರ ಧಾರೆ ಇದೆ ಅಂನ್ನು ನಮ್ಮ ಇಲಾಖೆಯಲ್ಲೂ ಅಳವಡಿಸಿಕೊಂಡಿದ್ದೇವೆ ಎಂದು. ಇದೇ ರೀತಿ ಮೀನುಗಾರರಿಗೆ ಕೂಡ ನಾವು ಪರಿಹಾರವನ್ನು ಕೊಡುತ್ತೇವೆ ಎಂದು ಹೇಳಿದರೂ ಕೂಡ ಆ ಪರಿಹಾರದ ಬಗ್ಗೆ ಯಾವುದೇ ಕಾರ್ಯಕ್ರಮ ನಮ್ಮ ಸರ್ಕಾರ ಇವತ್ತಿನವರೆಗೂ ರೂಪಿಸಿಲ್ಲ. ಆಯಿತು, ನಾವು ವಿದೇಶಿ ಮೀನುಗಾರರಿಂದ ಈ ಮತ್ಸ್ಯ ಸಂಪತ್ತು ಹಾಳಾಗಿದೆ ಎಂದು ಹೇಳಿದಾಗ ಕೋಸ್ಟಲ್ ಗಾರ್ಡ್‌ನವರನ್ನು ಕರೆಸಿ ಸ್ಟೇಟ್‌ಮೆಂಟ್ ಕೊಡಿಸಿದರು. ಇಲ್ಲ, ವಿದೇಶಿ ಮೀನುಗಾರರು 35 nautical ದೂರದಲ್ಲಿ ಇದ್ದಾರೆ ಅವರು ಈ ಕಡೆ ಬರುವುದಿಲ್ಲ ಎಂದು ಹೇಳಿದರು. ನಮ್ಮ ಮೀನುಗಾರರರು ಹೇಳುತ್ತಾರೆ 10 nautical ಮೈಲು ಒಳಗಡೆ ಅವರು ಬರುತ್ತಿದ್ದಾರೆ ಎಂಬು. ಅದು ಕೂಡ ಜೂನ್, ಜುಲೈ, ಆಗಸ್ಟ್ ತಿಂಗಳಲ್ಲಿ ನಮ್ಮ ಮೀನುಗಾರಿಕಾ ಬಂದರುಗಳಲ್ಲಿ ಮಳೆಗಾಲ ಇರುವುದರಿಂದ ಜಿಲ್ಲಾಧಿಕಾರಿಗಳು ಒಂದಜು ಆಜ್ಞೆ ಹೊರಡಿಸಿ ಈ ಮೂರು ತಿಂಗಳಲ್ಲಿ ಯಾರೂ ಮೀನುಗಾರಿಕೆಗೆ ಹೋಗಬಾರದು, ಮೀನುಗಾರಿಕೆಗೆ ಹೋಗಬಾರದು, ಮೀನುಗಾರಿಕೆಗೆ ಹೋದರೆ ನಾವು ಅದಕ್ಕೆ ಜವಾಬ್ದಾರರಲ್ಲ. ಇನ್ಶೂರೆನ್ಸ್ ಕಂಪನಿಯವರು ಇನ್‌ಷೂರೆನ್ಸ್ ಕೊಡುವುದಿಲ್ಲ ಎಂದು ಹೇಳಿದರು. ಅಂತಹ ಪರಿಸ್ಥಿತಿಯಲ್ಲಿ ವಿದೇಶಿ ಮೀನುಗಾರರು ಜೂನ್, ಜುಲೈ, ಆಗಸ್ಟ್‌ನಲ್ಲಿ ಕೂಡ ಬೇಕಾದಷ್ಟು ಮೀನುಗಳನ್ನು ಹಿಡಿದುಕೊಂಡು ಹೋದಾಗ ನಮಗೆ ಇಲ್ಲಿ ರಕ್ಷಣೆ ಎಲ್ಲಿ ಸಿಗುತ್ತದೆ? ಆದ್ದರಿಂದ ಸರ್ಕಾರ ಈ ವಿಚಾರದಲ್ಲಿ ಬಹಳ ಗಂಭೀರವಾಗಿ ಪರಿಗಣಿಸಬೇಕು. ಇದಕ್ಕಿಂತಲೂ ಬಹಳ ಮುಖ್ಯವಾಗಿ ತಮಗೆ ಇನ್ನೊಂದು ಮಾತನ್ನು ನಾನು ಹೇಳಬಯಸುತ್ತೇನೆ. ಇವತ್ತು ಈ ಮೀನುಗಾರಿಕಾ ಉದ್ಯಮವನ್ನೇ ಅವಲಂಬಿಸಿಕೊಂಡು ನಿಮ್ಮಲ್ಲಿ ಮಂಜುಗಡ್ಡೆ ಘಟಕಗಳು ಇವೆ. ಸುಮಾರು 160 ಮಂಜುಗಡ್ಡೆ ಘಟಕಗಳು ಕೇವಲ ಮಿನುಗಾರಿಕೆಯನ್ನೇ ಆಧರಿಸಿದರೆ ಮಾತ್ರ ಅವರು ಸಂಪಾದನೆ ಮಾಡಬಲ್ಲರು. ಇಂತಹ ಘಟಕಗಳು ಸಣ್ಣ ಕೈಗಾರಿಕಾ ಇಲಾಖೆಯಲ್ಲಿ ಬಂದಿರತಕ್ಕಂಥ ಘಟಕಗಳು. ಅದಕ್ಕೂ ಸಹಾಯಧನ ಇಲ್ಲದೆ ಎಷ್ಟೋ ಘಟಕಗಳು ಮುಚ್ಚಿಹೋಗುತ್ತಿವೆ. ಇವತ್ತು ಮೀನುಗಾರಿಕೆ ಇಲಾಖೆ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. 160 ಮಂಜುಗಡ್ಡೆ ಘಟಕಗಳಲ್ಲಿ ಕನಿಷ್ಟ 20-3- ಘಟಕಗಳು ಮಾತ್ರ ಸ್ವಲ್ಪ ಮಟ್ಟಿಗೆ ಉಸಿರಾಡುತ್ತಿವೆ. ಅವುಗಳಲ್ಲಿನ ಮಾಲೀಕರು ಸ್ವಲ್ಪ ಗಟ್ಟಿ ಇದ್ದುದ್ದರಿಂದ ಹಾಗೇ ಆಯಿತೋ ಏನೋ. ಇನ್ನು 140 ಘಟಕಗಳು ಸಂಪೂರ್ಣವಾಗಿ ಮುಚ್ಚಿಹೋಗಿವೆ. ಇವುಗಳ ಬಗ್ಗೆ ಕೆಲವು ಆಶ್ಚರ್ಯಕರ ಮಾಹಿತಿಯನ್ನು ತಮಗೆ ನಾನು ಕೊಡುತ್ತಿದ್ದೇನೆ. ಮಂಜುಗಡ್ಡೆ ಘಟಕಗಳಿಗೆ ಇವತ್ತು ಅವರು ಪಡೆಯತಕ್ಕಂತ ಆದಾಯದ ಮೇಲೆ

ಶೇಡಾ 80ರಷ್ಟು ಹಣವನ್ನು ವಿದ್ಯುಚ್ಛಕ್ತಿ ಇಲಾಖೆಗೆ ತುಂಬಬೇಕು. ಇವತ್ತು ರೈತರಿಗೆ ಪಂಪುಸೆಟ್ಟು ಅಳವಡಿಕೆ ಮಾಡಿಕೊಳ್ಳುವಾಗ ನೀವು ವಿದ್ಯುತ್ ರಿಯಾಯಿತಿಯನ್ನು ಕೊಡುತ್ತೀರಿ. ಆದರೆ ಮಂಜುಗಡ್ಡೆ ಘಟಕಗಳಿಗೆ ಉಪಯೋಗಿಸಿದ ವಿದ್ಯುಚ್ಛಕ್ತಿಗೆ ನಿವು ಏಕೆ ರಿಯಾಯ್ತಿಯನ್ನು ಕೊಡಬಾರದು? ಇವತ್ತು ಕೆ..ಬಿ.ಯವರಿಂದ ಮಂಜುಗಡ್ಡೆ ಘಟಕಗಳು ಸಂಪೂರ್ಣವಾಗಿ ಮುಚ್ಚಿವೆ. ಏಕೆಂದರೆ ಪಾವತಿ ಮಾಡುವುದಕ್ಕೆ ಉವರ ಹತ್ತಿರ ಹಣ ಇಲ್ಲ. ಕಳೆದವರ್ಷ ಮುಚ್ಚಿ ಈ ವರ್ಷ ಆರು . ತಿಂಗಳಲ್ಲಿ ಬಿಡುಗಡೆ ಮಾಡುವುದಕ್ಕೆ ಆಗದೆ ಕೆ.ಇ.ಬಿ.ಗೆ ಒಂದು ಕಡೆ ಪಾವತಿಮಾಡುವುದಕ್ಕೆ ಆಗುವುದಿಲ್ಲ. ಮೀನು ಬರುವಾಗ ಮಂಜುಗಡ್ಡೆ ಉತ್ಪಾದನೆ ಮಾಡೋಣ ಎಂದರೆ ಕರೆಂಟ್ ಇರುವುದಿಲ್ಲ. ಅಂತಹ ಒಂದು ವ್ಯತಿರಿಕ್ತ ಪರಿಸ್ಥಿತಿಯಲ್ಲಿ ಮಂಜುಗಡ್ಡೆ ಮೇಲೆ ಹಾಕಿರತಕ್ಕಂಥ ಮಾರಾಟ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು. ಅವರು ಉಪಯೋಗಿಸಕ್ಕಂಥ ವಿದ್ಯುತ್ತಿಗೆ ಯಾವ ರೀತಿ ರೈತರು ಉಪಯೋಗಿಸುವ ಪಂಪುಸೆಟ್ಟುಗಳಿಗೆ ವಿದ್ಯುತ್ ಮೇಲೆ ರಿಯಾಯಿತಿ ಕೊಡುತ್ತೀರೊ ಅದೇ ರೀತಿ ಮಂಜುಗಡ್ಡೆ ಘಟಕಗಳಿಗೆ ಅವರು ಬಳಸತಕ್ಕಂಥ ವಿದ್ಯುತ್ ಮೇಲೆ ರಿಯಾಯಿತಿಯನ್ನು ಕೊಡಬೇಕೆಂದು ನಾನು ನಿಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ. ಇಷ್ಟೇ ಅಲ್ಲ, ಇದನ್ನು ಒಂದು ಸೀಸನಲ್ ಇಂಡಸ್ಟ್ರೀಯಾಗಿ ನೀವು ತೆಗೆದುಕೊಳ್ಳಬೇಕು. ಏಕೆಂದರೆ ಸೀಸನಲ್ ಇಂಡಸ್ಟ್ರೀಯಾಗಿ ತೆಗೆದುಕೊಂಡು ಅವರಿಗೆ ಎಲ್ಲಾ ರೀತಿಯ ಪರಿಹಾರ ಕೊಟ್ಟರೆ ಮಂಜುಗಡ್ಡೆ ಘಟಕಗಳೂ ಕೂಡ ಮೀನುಗಾರಿಕಾ ಉದ್ಯಮದೊಂದಿಗೆ ಮಂದಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ. ಸಂಸ್ಕರಣಾ ಘಟಕಗಳೂ ಕೂಡ ಇದೇ ರೀತಿ ಶಿಥಿಲವಾಗಿ ಹೋಗುತ್ತಿರುವಾಗ ಅವರಿಗೆ ಒಂದು ರಕ್ಷಣೆಕೊಟ್ಟಹಾಗೆ ಆಗುತ್ತದೆ ಎಂಬ ಮಾತನ್ನು ತಮ್ಮ ಮುಂದೆ ಹೇಳಿ ಇವತ್ತು ಮೀನುಗಾರರ ಏನು ಬೇಡಿಕೆಗಳಿವೆ ಅದನ್ನು ಈಡೇರಿಸಬೇಕು. ಇದನ್ನು ಈಡೇರಿಸುವಲ್ಲಿ ಮೀನುಗಾರಿಕಾ ಸಮಾಜದಲ್ಲಿನ ವಿವಿಧ ಪಂಗಡಗಳು ಅದು ಒಳನಾಡು ಮೀನುಗಾರಿಕೆ ಇರಲಿ, ಅಥವಾ ಕರಾವಳಿ ಮೀನುಗಾರಿಕೆ ಇರಲಿ, ಪರಿಸ್ಥಿತಿ ಎಷ್ಟು ನಿಕೃಷ್ಟವಾಗಿದೆ ಎಂದರೆ ಆರ್ಥಿಕವಾಗಿ, ಸಮಾಜಿಕವಾಗಿ ಶಿಥಿಲಗೊಂಡಿರತಕ್ಕಂಥ ಒಂದು ಸಮಾಜವಾಗಿ ಬಂದಿದ್ದು ಇವತ್ತು ಆ ಸಮಾಜದಲ್ಲಿ ಇರತಕ್ಕಂಥ 49 ವಿವಿಧ ಪಂಗಡಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎನ್ನುವುದು ನಮ್ಮ ಬೇಡಿಕೆಯಾಗಿದೆ. ಅದರಲ್ಲಿ ಮಾಗೇರ ಒಂದೇ ಒಂದು ಕಮ್ಯುನಿಟಿಯನ್ನು ದೇವರಾಜ ಅರಸು ಕಾಲದಲ್ಲಿ ಅದನ್ನು ಪರಿಶಿಷ್ಟ ವರ್ಗವನ್ನಾಗಿ ಘೋಷಣೆ ಮಾಡಿದ್ದರು. ಆಮೇಲೆ ಮೀನುಗಾರರ ಸಮಾಜದ ಕೋಯಾ, ಭಿನ್ನಕೋಯಾ ರಾಜಕೋಯಾ. ಕೋಳಿದಾರ್, ತೊಕರೆಕೋಳಿ ತೊಳಚಾ ಪಂಗಡಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು. ಇವಿತು ನಮ್ಮ ಸರ್ಕಾರದ ಸಚಿವ ಸಂಪುಟ ಕಳೆದ ವರ್ಷ ಒಮ್ಮತದ ತೀರ್ಮಾನವನ್ನು ತೆಗೆದುಕೊಂಡು ಕೇಂದ್ರಕ್ಕೆ ಶಿಫಾರಸ್ಸನ್ನು ಕಳಿಹಿಸಿದ್ದಾರೆ. ಆದರೆ ನಾವು ಕೇಳಿದ್ದು ಇಷ್ಟೆಯ ಸುಪ್ರೀಂ ಕೋರ್ಟು ಮಹತ್ವಪೂರ್ಣವಾದ ತೀರ್ಪು

ನೀಡಿದೆ. ಎಐಆರ್ 1985 ಎಸ್ 1485ರ ಪ್ರಕಾರ-If one synonum of any caste or community is included in the scheduled caste or scheduled tribe, with the beneit of that synonym be extended to all synonyms." ಎಂದು ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟಿದೆ. ಹೀಗೆ ಇರುವಾಗ ಸುಪ್ರೀಂ ಕೋರ್ಟಿನ ಈ ತೀರ್ಪಿನ ಆಧಾರದ ಮೇಲೆ ಉಳಿದ ಪಂಗಡಗಳನ್ನೂ ಆ ಆದೇಶದ ಪ್ರಕಾರವೇ ಅವುಗಳನ್ನು ಪರಿಶಿಷ್ಟ ಪಂಗಡಗಳೆಂದು ಘೋಷಣೆ ಮಾಡಿವುದಕ್ಕೆ ನಿಮಗೆ ಯಾವ ತೊಂದರೆಯೂ ಇರಲಿಕ್ಕಿಲ್ಲ. ಆ ರೀತಿಯಲ್ಲಿ ನೀವು ಇದರ ಬಗ್ಗೆ ಏಕೆ ಕಾರ್ಯಾಚರಣೆ ಮಾಡಬಾರದು ಎನ್ನುವ ಮಾತನ್ನು ತಮ್ಮ ಮುಂದೆ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ ಇವತ್ತು ಈ ಮೀನುಗಾರಿಕಾ ಉದ್ಯಮದ ಬಗ್ಗೆ ಮೀನುಗಾರಿಕಾ ಸಚಿವರು ಈಗಾಗಲೇ ಬಂದಿದ್ದಾರೆ ನಮ್ಮ ಬೇಡಿಕೆಗಳ ಬಗ್ಗೆ ಮಾವು ಈಗಾಗಲೇ ಮಾರ್ಚ್ ಒಂದರಿಂದ ಮಂಗಳೂರು, ಉಡುಪಿ, ಕಾರವಾರ ಜಿಲ್ಲಾಧಿಕಾರಿಗಳ ಕಛೇರಿ ಎದುರಿನಲ್ಲಿ ರಾಷ್ಟ್ರೀಯ ಮೀನುಗಾರಿಕಾ ಸಂಘಟಣೆ ವತಿಯಿಂದ ನಾವು ಧರಣಿ ಮುಷ್ಕರವನ್ನು ಮಾಡಿ ಒಂದು ಮನವಿಯನ್ನೂ ಕೂಡ ಕೊಟ್ಟಿದ್ದೆವು. ಆದರಲ್ಲಿ ಯಾಂತ್ರಿಕೃತ ದೋಣಿಗಳು ಬಳಸತಕ್ಕಂಥ ಡೀಸಲ್‌ನ ಮೇಲಿನ ಮಾರಾಟ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು. ಎರಡನೆಯದಾಗಿ ಯಾಂತ್ರಿಕೃತ ದೋಣಿಗಳಿಗಾಗಿ ಮಾಡಿರತಕ್ಕಂಥ ಸಾಲದ ಮೇಲಿನ ಬಡ್ಡಿಯನ್ನು ಚಕ್ರಬಡ್ಡಿಯನ್ನು ಮನ್ನಾ ಮಾಡಬೇಕೆಂದು ಕೇಳಿಕೊಡಿದ್ದೆವು. ಈ ಕುರಿತು ತಾವುಗಳು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಮತ್ತು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಬೇಕು. ಇವೊತ್ತು ಪಾವತಿ ಮಾಡತಕ್ಕಂಥ ಸಾಲದ ಅವಧಿಯನ್ನು ಸಂಪೂರ್ಣವಾಗಿ ಡಿಫರ್ ಮಾಡಿ. ಈ ವರ್ಷದಲ್ಲಿ ಮೀನುಗಾರಿಕಾ ಸಾಲವನ್ನು ಮರುಪಾವತಿ ಮಾಡಬೇಕಾಗಿಲ್ಲ, ಅದನ್ನು ಮುಂದಿನ ವರ್ಷದಲ್ಲಿ ಮಾಡಬಹುದು ಎಂದು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ನಿರ್ದೇಶನವನ್ನು ಕೊಡಬೇಕು. ಆ ಕುರಿತು ಕೇಂದ್ರ ಸರಕಾರಕ್ಕೆ ಒತ್ತಾಯ ತರಬೇಕು. ಅದೇ ರೀತಿಯಲ್ಲಿ ವಿದೇಶಿ ಮೀನುಗಾರಿಕೆಗೆ ಕೊಟ್ಟಿರತಕ್ಕಂಥ ಪರವಾನಗೆಗಳನ್ನು ಹಿಂದಕ್ಕೆ ಪಡೆದುಕೊಂಡು ಇದರಿಂದ ಆಗತಕ್ಕಂಥ ಕೆಟ್ಟ ಪರಿಣಾಮವನ್ನು ತಪ್ಪಿಸಬೇಕು ನಮ್ಮ ಮೀನುಗಾರಿಕಾ ಅಧಿಕಾರಿಗಳಿಗೆಲ್ಲಾ ಮಾಹಿತಿಗಳು ಇವೆ. ಅವರು ಸದರಿ ಮಾಹಿತಿಗಳನ್ನು ಅಧ್ಯಯನ ಮಾಡಲು ಹಿಂಜರಿಯುತ್ತಾರೋ ಏನೋ ಎಂಬುದು ನನಗೆ ಗೊತ್ತಿಲ್ಲ. ಮಾರ್ಚ್ 5ರಂದು ಉಡುಪಿಯಲ್ಲಿ ಕೆಡಿಪಿ ಮೀಟಿಂಗ್ ನಮ್ಮ ಮೀನುಗಾರಿಕಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದಾಗ ಹೇಳಿದ್ದೆ. ಮೀನುಗಾರಿಕಾ ಕ್ಷಾಮ ಬರಲು ಏನು ಕಾರಣ ಎಂಬ ಬಗ್ಗೆ ಅಧ್ಯಯನ ಮಾಡಿದ್ದಾರೆಯೇ, ಆ ಕುರಿತು ಮಾಹಿತಿಗಳನ್ನು ಸಂಗ್ರಹಿಸಿದ್ದಾರೆಯೇ ಎಂದರೆ ಅದಕ್ಕೆ ಏನೂ ಮಾಡಿಲ್ಲ ಎಂಬ ಉತ್ತರವನ್ನು ನಾನು ಹೇಳಿದ್ದೇನೆ. ಇದು ತುಂಬಾ ವಿಷಾದನೀಯವಾದ ವಿಚಾರ. ಇವೊತ್ತು ಮೂರು ಲಕ್ಷ ಜನರು ಉಪವಾಸದಲ್ಲಿ ಇರುವಾಗ ಏಕೆ ಇಂಥ ಅಧ್ಯಯನವನ್ನು ಮಾಡಿಲ್ಲ ಎನ್ನುವ ಮಾತನ್ನು ತಮ್ಮ ಮೂಲಕ ಕೇಳಲಿಚ್ಚಿಸುತ್ತೇನೆ.

ಶ್ರೀ ಕೆ. ಜಯರಾಮ ಶೆಟ್ಟಿ :— ಮಾನ್ಯ ಅಧ್ಯಕ್ಷರೇ, ನಮ್ಮ ಸರಕಾರದ ವತಿಯಿಂದ ಯಾವುದೇ ಸಭೆಯನ್ನು ಈ ಕುರಿತು ಮಾಡುವ ಆಸಕ್ತಿಯನ್ನು ತೋರಿಸಿಲ್ಲ. ಅಧಿಕಾರಿಗಳು ಸರಕಾರಕ್ಕೆ ಮತ್ಸ್ಯಕ್ಷಾಮ ಇಲ್ಲ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಸರಕಾರವು ಯಾವುದಾದರೂ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ಅನುಭವದ ಅಂಕಿ ಅಂಶಗಳನ್ನು ಕೊಡುತ್ತಿದ್ದಾರೆ. ಆದರೆ ಸರಕಾರವು ಮತ್ಸ್ಯ ಕ್ಷಾಮವು ಇಲ್ಲ ಎಂದು ಹೇಳುತ್ತಿದ್ದಾರೆ. ಒಂದು ಮತ್ಸ್ಯಕ್ಷಾಮ ಇದೆ ಎಂದು ಘೋಷಣೆ ಮಾಡಬೇಕು. ಇಲ್ಲವಾದಲ್ಲಿ ಆ ಕುರಿತು ಮನದಟ್ಟು ಮಾಡಿಕೊಡಬೇಕು. ವಿದೇಶಿ ಮತ್ಸ್ಯೋದ್ಯಮದ ಬಗ್ಗೆ ಹೇಳಿದ್ದಾರೆ. ಮಂಗಳೂರಿನಲ್ಲಿ ಮೀನುಗಾರಿಕಾ ವಿಶ್ವವಿದ್ಯಾಲಯ ಇದೆ. ಅಲ್ಲಿ ಮೀನುಗಾರರ ಮಕ್ಕಳಿಗೆ ಹೊಸ ತಂತ್ರಜ್ಞಾನ ಕಲಿಸಿಕೊಡುವಂತಾಗಬೇಕು. ಅಲ್ಲಿ ಮೀನುಗಾರರ ಮಕ್ಕಳಿಗೆ ಅವಕಾಶ ಒದಗಿಸಿಕೊಟ್ಟಿಲ್ಲ. ಅಲ್ಲಿ ಓರಿಸ್ಸಾ, ತಮಿಳುನಾಡಿನ ವಿದ್ಯಾರ್ಥಿಗಳಿದ್ದಾರೆ. ನಮ್ಮ ರಾಜ್ಯದವರು ಯಾರೂ ಇಲ್ಲ. ಮಂಗಳೂರಿನವರಂತೂ ಇಲ್ಲವೇ ಇಲ್ಲ. ಆದ್ದರಿಂದ ರಾಜ್ಯದ ಮೀನುಗಾರರ ಮಕ್ಕಳಿಗೆ ಅಲ್ಲಿ ಮೀಸಲಾತಿ ಸೀಟುಗಳನ್ನಾದರೂ ಮಾಡಿಕೊಡಿ.

ಶ್ರೀ ಯು.ಆರ್. ಸಭಾಪತಿ :— ವಿದೇಶಿ ಮೀನುಗಾರಿಕೆಯನ್ನು ಹೇಗೆ ಸಂಪೂರ್ಣವಾಗಿ ನಿಷೇದ ಮಾಡಬೇಕೆನ್ನುವ ಪ್ರಸ್ತಾವನೆಯು ಸರಕಾರದ ಮುಂದಿದ್ದರೂ ಕೂಡ ಕರ್ನಾಟಕ ಕರಾವಳಿಯಲ್ಲಿಯೂ ಕೂಡ ಸೂಕ್ತ ಮುಂಜಾಗರೂಕತೆಯನ್ನು ವಹಿಸಿದಲ್ಲಿ ಇದು ಸಾಧ್ಯವಾಗುತ್ತದೆ. ಮಂಜುಗಡ್ಡೆ ಮೇಲಿನ ಮಾರಾಟ ತೆರಿಗೆಯನ್ನು ರದ್ದು ಪಡಿಸುವುದರ ಜೊತೆಗೆ ಮಂಜುಗಡ್ಡೆಯ ಮೇಲೆ ಉಪಯೋಗಿಸುವ ವಿದ್ಯುತ್ ಶುಲ್ಕವನ್ನು ರಿಯಾಯಿತಿ ಮಾಡಬೇಕೆಂದು ಹೇಳ ಬಯಸುತ್ತೇನೆ. ರಾಜ್ಯಪಾಲರ ಭಾಷಣವನ್ನು ಬಹಳ ಕೂಲಂಕಷವಾಗಿ ಮನದಟ್ಟು ಮಾಡಿಕೊಳ್ಳುವುದಾದರೆ, ಅಧ್ಯಯನ ಮಾಡುವುದಾದರೆ ಅನೇಕ ಇಲಾಖೆಗಳ ವಿಷಯವಾಗಿ ಹೇಳಬೇಕಾಗುತ್ತದೆ. ನಾನು ಕಳೆದಸಾರಿ ಅವಿಶ್ವಾಸ ನಿರ್ಣಯದ ಮಂಡನೆ ವೇಳೆಯಲ್ಲಿ ಪ್ರಮುಖವಾಗಿ ಮುಜರಾಯಿ ಇಲಾಖೆಗೆ ಸಂಬಂಧಪಟ್ಟಂತೆ ಒಂದು ದೊಡ್ಡ ಹಗರಣವನ್ನು ಇಲ್ಲಿ ಪ್ರಸ್ತಾಪಿಸಿದ್ದೆನು. ಆ ಹಗರಣದ ಬಗ್ಗೆ ಯಾವ ಉತ್ತರವು ಇದುತನಕವೂ ಇಲ್ಲ. ಇವೊತ್ತು ಎಲ್ಲಿಯ ತನಕ ಹೋಗಿದೆ ಅಂದರೆ, ಧಾರ್ಮಿಕ ದತ್ತಿ ಇಲಾಖೆಯು ಒಂದು ವ್ಯವಾರಿಕಾ ಸಂಸ್ಥೆಯಾಗಿ ಮುಂದುವರಿಯುತ್ತಾ ಇದೆ. ಇದರಲ್ಲಿ ಮಂತ್ರಿಗಳು ಶಾಮೀಲಾಗಿದ್ದಾರೋ, ಅಧಿಕಾರಿಗಳು ಶಾಮೀಲಾಗಿದ್ದಾರೋ ಯಾರ್ಯಾರು ಎಷ್ಟೆಷ್ಟು ವ್ಯವಹಾರಗಳನ್ನು ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಾಗುತ್ತಾ ಇಲ್ಲ. ಕಳೆದ ಸಾರಿ ಮಾತನಾಡಿದಾಗ ಶ್ರೀ ವೆಂಕಟೇಶ್ವರ ದೇವಸ್ಥಾನದ ಬಗ್ಗೆ ಇದ್ದ ಸಂಪೂರ್ಣ ಮಾಹಿತಿಗಳನ್ನು ಹೇಳಿದ್ದೆ. ಅದರ ಬಗ್ಗೆ ನಮಗೆ ಮತ್ತು ಮಾನ್ಯ ಸಚಿವರಿಗೂ ವಿವರಗಳನ್ನು ಕೊಟ್ಟಿದ್ದರೂ ಕೂಡ ಯಾವುದೇ ವಿಚಾರವನ್ನು ಮಾಡಲಿಲ್ಲ. ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಉತ್ತರಿಸುವಾಗ ಮಾನ್ಯ ಸಚಿವರು ಈ ಕುರಿತು

ಉತ್ತರಿಸಬೇಕು. ಇವೊತ್ತೂ ಕೂಡ ಒಂದು ಗಂಭೀರವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದೇನೆ. ಭ್ರಷ್ಟಾಚಾರವು ಇವರ ಮುಜರಾಯಿ ಇಲಾಖೆಯಲ್ಲಿದಷ್ಟು ಬೇರೆ ಯಾವ ಇಲಾಖೆಯಲ್ಲಿಯೂ ಇರಲಾರದು. ಯಾರಾಯರು ಭ್ರಷ್ಟ ಅಧಿಕಾರಿಗಳನ್ನು ಮಾನ್ಯ ಜಾಲಪ್ಪನವರು ಸಸ್ಪೆಂಡ್ ಮಾಡಿದ್ದಾರೋ ಅವರೆಲ್ಲರನ್ನೂ ಇವರು ಬಂದು ರಿವೋಕ್ ಮಾಡಿದರು. ಅಂಥವರ ಮೇಲಿದ್ದ ಇಲಾಖಾ ತನಿಖೆಯನ್ನು ಬಿಟ್ಟು ಅವರಿಗೆ ಬಡ್ತಿಯನ್ನು ಕೂಡ ನೀಡಿದ್ದಾರೆ. ಒಳ್ಳೆಯ ಆದಾಯ ಬರುವ ಕಡೆಗಳಿಗೆ ಅಂಥವರನ್ನು ಕಳುಹಿಸಿಕೊಟ್ಟಿದ್ದಾರೆ. ತಿರುಪತಿಯಲ್ಲಿ ನಡೆದಿರತಕ್ಕಂಥ ಹಗರಣವನ್ನು ನೋಡಬೇಕು. ನಮ್ಮ ಕರ್ನಾಟಕ ಭೂಮಿ ಅಲ್ಲಿ ಬೇಕಾದಷ್ಟು ಇದೆ. ನಮ್ಮ ಅಧಿಕಾರಿಗಳು ಅಲ್ಲಿ ಹೋಗಿ ಆಂಧ್ರದವರಿಗೆ ಮಾರಾಟ ಮಾಡಿದ್ದಾರೆ. ಅಲ್ಲಿ ವ್ಯವಹಾರ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ವಿಚಾರಣೆಯನ್ನು ನಡೆಸಬೇಕು. ಅವೊತ್ತು ಏನು ಉತ್ತರವನ್ನು ಕೊಟ್ಟಿದ್ದಾರೆ ಅದರ ಬಗ್ಗೆ ನಾನು ಸಂಪೂರ್ಣವಾದ ಮಾಹಿತಿಗಳನ್ನು ಕೊಡುತ್ತೇನೆ. ಇದರಲ್ಲಿ ನಿಮ್ಮ ಮುಜರಾಯಿ ಮಂತ್ರಿಗಳೂ ಕೂಡ ಶಾಮೀಲಾಗಿದ್ದಾರೆ ಎಂದು ಹೇಳಬಯಸುತ್ತೇನೆ. ಅದಕ್ಕೆ ಬೇಕಾಗುವಂಥ ದಾಖಲೆಗಳನ್ನು ನಾನು ಕೊಡುತ್ತೇನೆ. ಇಲ್ಲವಾದರೆ ನಾನು ಕಳೆದ ಸಾರಿ ಕೊಟ್ಟಂಥ ದಾಖಲೆಗಳನ್ನು ಉತ್ತರಿಸೇಕು. ನಾನು ಇಲ್ಲಿ ಪ್ರಸ್ತಾಪ ಮಾಡಿದ ವಿಚಾರಗಳಿಗೆ ಮುಜರಾಯಿ ಮಂತ್ರಿಗಳು ಕೊಡದಿದ್ದರೆ, ನಾವಾದರೂ ಕೊಡದಿದ್ದರೆ, ನಾನು ಮಾಡಿದ ಆರೋಪಗಳು ಸಾಬೀತಾಗಿದೆ ಎಂದು ಹೇಳಬಯಸುತ್ತೇನೆ. ಸಂಬಂಧಪಟ್ಟ ದಾಖಲೆಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ ಉತ್ತರಿಸುವಾಗ ಆ ಕುರಿತು ಹೇಳಬೇಕು.

ಶ್ರೀ. ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :— ಮಾನ್ಯ ಅಧ್ಯಕ್ಷರೇ, ನಾನು ಮುಜರಾಯಿ ಇಲಾಖಾ ಮಂತ್ರಿಯಾದ ಮೇಲೆ ಏನು ಮಾಡಿದ್ದೇನೆ ಎಂಬ ಬಗ್ಗೆ ನಿಮ್ಮ ಒಂದೊಂದು ಅಕ್ಷರಕ್ಕೂ ಉತ್ತರ ಕೊಡುತ್ತೇನೆ. ನಮ್ಮ ಇಲಾಖೆಯ ನೂರಾರು ಕೋಟಿ ಬಜೆಟ್ ಇರತಕ್ಕಂಥಾದ್ದು ಅಲ್ಲ. ನೀವು ಕೇಳಿದ ಪ್ರಶ್ನೆಗಳಿಗೆ ಉತ್ತರವು ತಯಾರಾಗಿದೆ. ಉತ್ತರಿಸುವ ಅವಕಾಶ ಬಂದಾಗ ಅಕ್ಷರ ಅಕ್ಷರಕ್ಕೂ ಉತ್ತರ ಕೊಡುತ್ತೇನೆ. ಆ ಬಗ್ಗೆ ಯಾವ ಅನುಮಾನವೂ ಇಲ್ಲ.

ಶ್ರೀ ಯು.ಆರ್. ಸಭಾಪತಿ :— ಇವರ ಇಲಾಖೆಯ ಎಲ್ಲಾ ಪೋಸ್ಟಗಳೂ ಇನ್‌ಹೆರ್ಡ್ ಪೋಸ್ಟ್‌ಗಳು. 10-12 ದೇವಸ್ಥಾನದ ಪೋಸ್ಟ್‌ಗಳು ಇನ್‌ಹೆರ್ಡ್ ಪೋಸ್ಟ್‌ಗಳು. ರೂಲ್ 32 ಪ್ರಕಾರ ಬಡ್ತಿ ಕೊಡುವುದು ಅಂಥ ಸ್ಥಳಗಳಿಗೆ ಹಾಕಿ ಬಿಡುವುದು.

ಅಧ್ಯಕ್ಷರು :— ದೇವಸ್ಥಾನಗಳಲ್ಲಿ ಇರುವುದು ಗಂಟೆ ಮತ್ತು ಜಾಗಟೆಗಳು. ಇಲಾಖೆಗೆ ಇರುವ ಬಜೆಟ್ ಕೂಡ ಕಡಿಮೆ. ದೇವಸ್ಥಾನಗಳಲ್ಲಿ ಗಂಟೆ ಜಾಗಟೆ ಬಿಟ್ಟು ಏನಿರುತ್ತದೆ ಎಂಬುದು ಅವರ ಪ್ರಶ್ನೆ.

ಶ್ರೀ ಎಸ್ ರಾಜೇಂದ್ರನ್:— ಮಾನ್ಯ ಅಧ್ಯಕ್ಷರೇ ಏನೂ ಇಲ್ಲ, ಬಜೆಟ್ ಇಲ್ಲ ಎಂದು ಹೇಳುವುದಕ್ಕೂ ಒಬ್ಬ ಮಂತ್ರಿಗಳೇ?

ಶ್ರೀ ಮುನಿಯಪ್ಪ ಮುದ್ದಪ್ಪ:— ತಿರುಪತಿ ದೇವಸ್ಥಾನದ ಸಮಿತಿಯಲ್ಲಿ ಮಾನ್ಯ ರಾಜೇಂದ್ರನ್‌ರವರೂ ಕೂಡ ಸದಸ್ಯರು. ಅಲ್ಲಿ ಏನೇನು ನಡೆಯುತ್ತದೆ ಎಂಬುದನ್ನು ಅವರು ನೋಡುತ್ತಾರೆ.

ಶ್ರೀ ಎಸ್. ರಾಜೇಂದ್ರನ್:— ಹೌದು ನಾನು ತಿರುಪತಿ ಸಮಿತಿಗೆ ಸದಸ್ಯನಾಗಿದ್ದೇನೆ. ತಿರುಪತಿಯಲ್ಲಿ ಏನೂ ಇಲ್ಲ ಎಂದು ಹೇಳಲು ಸಾಧ್ಯವಿಲ್ಲ. ಏನು ಇಲ್ಲ ಎಂದು ಅಧ್ಯಕ್ಷರು ಈ ಇಲಾಖೆಯಲ್ಲಿ ಏನೂ ಇಲ್ಲ ಎಂದು ಹೇಳಿದ್ದರಿಂದ, ಅದಕ್ಕೆ ಒಬ್ಬ ಮಂತ್ರಿ ಬೇಕೇ ಎಂಬ ಅನುಮಾನ ಬಂತು.

ಶ್ರೀ ಯು.ಆರ್. ಸಭಾಪತಿ:— ನನ್ನ ವಿಚಾರಧಾರೆಯನ್ನು ತಮ್ಮ ಮುಂದಿಡುತ್ತಾ ಇವೊತ್ತು ನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ ಗಲಭೆಗಳು ಮತ್ತು ಅದರ ಹಿನ್ನಲೆಯ ಬಗ್ಗೆ ಒಂದೆರಡು ಮಾತನ್ನು ಹೇಳಬಯಸುತ್ತೇನೆ. ಇವೊತ್ತು ನಮ್ಮ ಯುವ ಜನಾಂಗದ ಮೇಲೆ ನಮ್ಮ ಕಣ್ಣಿಡಬೇಕಾಗಿದೆ. ನಮ್ಮ ಕಾಲ ಮುಗಿಯುತ್ತಾ ಬಂಯತ್ತದೆ. ಇನ್ನು 10-15 ವರ್ಷದೊಳಗಾಗಿ ಬೇರೆಕಡೆಗೆ ಹೋಗುವ ಸಂದರ್ಭ ಬರುತ್ತದೆ. ಈಗಾಗಲೇ ತಾವುಗಳು ಸದನದಲ್ಲಿ ಓದುತ್ತಿರುವ ಸಂತಾಪ ಸೂಚನೆಗಳನ್ನು ಕೇಳುವಾಗ ಹಾಗೆ ಕಾಣುತ್ತದೆ. ಆದ್ದರಿಂದ ನಮ್ಮ ಯುವ ಜನಾಂಗವು ಮುಂದೆ ಬರಬೇಕು.ಆ ಜನಾಂಗಕ್ಕೆ ಈ ಸದನದಲ್ಲಿ ನಾವುಗಳು ಅವರಿಗೆ ಕೊಡತಕ್ಕಂಥ ಸಂದೇಶ ಏನು? ನಮ್ಮ ದೇಶವು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ದೇಶವಾಗಿದೆ. ಈ ರಾಜ್ಯದಲ್ಲಿ ಶಾಂತಿ ಪ್ರಿಯರಾಗಿ ಬದುಕಬೇಕೆಂದು ಬಯಸಿದ್ದೇವೆ. ಮುಂಬಯಿ, ಬಿಹಾರ, ಉತ್ತರಪ್ರದೇಶಗಳಂತೆ ನಮ್ಮ ರಾಜ್ಯವಾಗಬಾರದು- ಎಂಬ ಚಿಂತನೆಯು ನಮ್ಮಲ್ಲಿದೆ. ಹಾಗೆ ಆಗಬೇಕಾದರೆ ಮೊದಲು ನಮ್ಮಲ್ಲಿನ ಕಾನೂನು ಮತ್ತು ಶಿಸ್ತುಪಾಲನೆಯು ಸಮಗ್ರವಾಗಿ ಬದಲಾವಣೆಯಾಗಿ ಯೋಗ್ಯರೀತಿಯಲ್ಲಿ ಮುಂದುವರಿಯುವಂತೆ ಆಗಬೇಕು. ಇವೊತ್ತು ನಗರದಲ್ಲಿ ಹೊಯ್ಸಳ ಹಾಕಿದ್ದೇವೆ, ಇನ್ನಾವುದೇ ರೀತಿಯ ವ್ಯವಸ್ಥೆಯನ್ನು ಮಾಡಿದ್ದೇವೆ ಎಂದು ಹೇಳಬಹುದು. ಎಷ್ಟು ವ್ಯವಸ್ಥೆ ಮಾಡಿದರೂ ಕೂಡ ಬೇಕಾದಷ್ಟು ದರೋಡೆಗಳು ಆಗುತ್ತಾ ಇವೆ. ಮಾನಸಿಕವಾಗಿ ಚಿತ್ರಹಿಂಸೆಗಳನ್ನು ನೋಡುತ್ತಿದ್ದೇವೆ. ಟಿವಿ ಧಾರವಾಹಿಗಳಲ್ಲಿ ಎಷ್ಟು ಒಳ್ಳೆಯ ಬೋಧನೆಯು ನಮ್ಮ ಮಕ್ಕಳಿಗೆ ಸಿಗುತ್ತಿದೆ ಎಂಬುದನ್ನು ನೋಡಬಹುದು. ಬೇಕಾದಷ್ಟು ಚ್ಯಾನಲ್‌ಗಳಲ್ಲಿ ಬರುವಂತಹ ಸೀರಿಯಲ್‌ಗಳಲ್ಲಿ ಅತ್ಯಾಚಾರ, ಅನಾಚಾರ, ಕೊಲೆ, ಸುಲಿಗೆ, ದರೋಡೆ, ಹಿರಿಯರೊಂದಿಗೆ ಜಬರ್‌ದಸ್ತ್‌ನಲ್ಲಿ ಅಯೋಗ್ಯವಾಗಿ ಮಾತನಾಡುವುದು ಇರುತ್ತದೆ. ಅಶ್ಲೀಲತೆಯು ಹಾಗೂ ಮಾದಕದ್ರವ್ಯಗಳ ಕುರಿತು ಕೆಟ್ಟ

ಮಾಹಿತಿಗಳು ಸಿಗುತ್ತವೆ ಭೂಗತದೊರೆಗಳನ್ನು ವೈಭವೀಕರಿಸುವಂಥ ಯುವಕರು ಆ ದಿಕ್ಕಿನಲ್ಲಿ ಮುಂದೆ ಹೋಗುತ್ತಿದ್ದಾರೆ. ಇವೊತ್ತು ಭೂಗತ ದೊರೆಗಳ ಮುಖ್ಯ ಕೇಂದ್ರವಾಗಿ ಕರ್ನಾಟಕ ರಾಜ್ಯವು ಬರುತ್ತಾ ಇದೆ. ಮಾದಕದ್ರವ್ಯಗಳ ದೊಡ್ಡ ದೊಡ್ಡ ದೊರೆಗಳು ನಮ್ಮಲ್ಲಿದ್ದಾರೆ. ಶಿಸ್ತುಪಾಲನೆಯನ್ನು ಕಾಪಾಡಿಕೊಳ್ಳ ಬೇಕಾದಂಥ ಪೋಲೀಸ್ ಇಲಾಖೆ ಅಂಥ ದುಷ್ಕರ್ಮಿಗಳನ್ನು ಯಾವ ರೀತಿಯಲ್ಲಿ ಹದ್ದುಬಸ್ತಿನಲ್ಲಿಡುತ್ತಿದ್ದಾರೆ? ಅಶ್ಲೀಲತೆಯನ್ನು ನಿಲ್ಲಿಸುವ ಸಲುವಾಗಿ ಸಾಕಷ್ಟು ಮಹಿಳಾ ಸಂಘಗಳು ಬೇಕಾದಷ್ಟು ಚಳುವಳಿಗಳನ್ನು ಮಾಡಿದ್ದಾರೆ. ಇವೊತ್ತು ಸಿನಿಮಾ ಮಂದಿರಗಳಲ್ಲಿ ಪ್ರದರ್ಶಿತವಾಗುತ್ತಿರುವ ಅಶ್ಲೀಲತೆಯನ್ನು ನಿರ್ಬಂಧಿಸುವ ನಿಟ್ಟಿನಲ್ಲಿ ಯಾವ ಕೆಲಸವನ್ನು ಸರ್ಕಾರದವರು ಮಾಡಿದ್ದಾರೆ?

12.40 ಪಿ.ಎಂ.

ಇದು ಮಹಿಳಾ ವರ್ಷವೆಂದು ನಾವಿಲ್ಲೀ ಮಹಿಳೆಯರ ಬಗ್ಗೆ ಮಾತನಾಡುತ್ತಿರುತ್ತೇವೆ. ಆದರೆ ಶೋಷಣೆ ಅತ್ಯಾಚಾರಕ್ಕೆ ಒಳಗಾದವರಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ತಪ್ಪಿತಸ್ಥರ ವಿರುದ್ಧ ಇವರೇನು ತನಿಖೆ ನಡೆಸುತ್ತಾರೆ ಅದರ ಪ್ರಕಾರ ಎಷ್ಟು ಜನರಿಗೆ ಆರೋಪ ಸಾಬಿತಾಗಿದೆ ಎಂಬುದನ್ನು ಕೇಳಬಯಸುತ್ತೇನೆ ಅದರಲ್ಲೂ ಮಾದಕದ್ರವ್ಯದ ಬಗ್ಗೆ ನಾನು ಗಂಭೀರವಾಗಿ ಆರೋಪ ಮಾಡಿದ್ದೇನೆ. ಎಷ್ಟು ಅಪರಾಧಿಗಳನ್ನು ಹಿಡಿದಿದ್ದೀರಿ. ಎಷ್ಟು ಜನ ಸತ್ತಿದ್ದಾರೆ ಎಂದು ಕೇಳಿದಾಗಲೆಲ್ಲಾ, ಅಬ್ಕಾರಿ ಇಲಾಖೆಯಲ್ಲಿರುವ ನಾರ್ಕಾಟಿಕ್ ವಿಭಾಗದಲ್ಲಿ ಒಬ್ಬ ಅಧಿಕಾರಿ ಇದ್ದಾನೆ, ಅವರಿಂದ ಬರುವ ಉತ್ತರವೇನು? ಇಡಿ ವರ್ಷದಲ್ಲಿ 10 ಅಪರಾಧಿಗಳನ್ನು ಪತ್ತೆಹಚ್ಚಲಾಗಿದೆ. ಕೇವಲ 34 ಸಾವಿರ ಮೌಲ್ಯದ ಮಾದಕ ದ್ರವ್ಯ ಪತ್ತೆಹಚ್ಚಲಾಗಿದೆಯಂತೆ ಅಧ್ಯಕ್ಷರೇ, ಇಲ್ಲಿರುವ ಸಣ್ಣ ಡೈರಿ ಅಳತೆಯಲ್ಲಿ ಒಂದು ಕೋಟಿ ಮೌಲ್ಯದ ಮಾದಕ ದ್ರವ್ಯ ಸಂಗ್ರಹಿಸಬಹುದು. ಒಂದೊಂದು ಲಾರಿ ಹಿಡಿದರೂ ಕನಿಷ್ಟ 10-15 ಕೋಟಿ ಮೌಲ್ಯದ ಮಾದಕ ದ್ರವ್ಯ ಕಳ್ಳ ಸಾಗಾಟ ಆಗುತ್ತಿರುವಾಗ ನಾರ್ಕಟಿಕ್ ವಿಭಾಗದವರು ನಮಗೆ ಉತ್ತರ ಕೊಡುತ್ತಾರೆ. 34 ಸಾವಿರ ಮಾದಕದ್ಯವ್ಯ ಪತ್ತೆ ಹಚ್ಚಲಾಗಿದೆ, ಎಷ್ಟು ವಾಹನಗಳನ್ನು ಮುಟ್ಟುಗೋಲು ಹಾಕಿದ್ದೀರಿ ಅಂದರೆ ನಾವು ಯಾವುದೇ ವಾಹನವನ್ನು ಮುಟ್ಟುಗೋಲು ಹಾಕಿಲ್ಲ ಎಂದು ಉತ್ತರಿಸುತ್ತಾರೆ. ಹಾಗಾದರೆ ಇವತ್ತು ಕಾನೂನು ಶಿಸ್ತು ಪಾಲನೆಯಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ ನೋಡಿ. ಮದ್ಯಪಾನ ನಿಷೇದ ಮಾಡುತ್ತೇವೆಂದು ಬಹಳ ಕಾಳಜಿಯಿಂದ ಮೊದಲಿಗೆ ಎಂದು ಹೇಳಿಕೆ ಕೊಟ್ಟರಿ. ಹಾಗೆ ನಿಷೇದ ಮಾಡುವುದನ್ನು ಬಿಟ್ಟು ಮದ್ಯತಯಾರಿಕರ ಜೊತೆ ಶಾಮೀಲಾಗಿ ಅವರಿಗೆ ಬೇಕಾದ ರೀತಿ ಮಾಡಲು ಹೊರಟರು. ಇವತ್ತು ನಾನು ಸರ್ಕಾರವನ್ನು ಕೇಳುವುದು ಇಷ್ಟೇ ಅಧಿಕಾರ ಬರುತ್ತದೆ ಹೋಗುತ್ತದೆ ಅದು ದೊಡ್ಡ ವಿಷಯವಲ್ಲ. ಇಲ್ಲಿ ಬಂದು ಐದು ವರ್ಷ ಮೆರೆದಾಡಬಹುದು, ಆದರೆ ಆ ಐದು ವರ್ಷದಲ್ಲಿ ನಾವೇನು ಸಾದಿಸಿದ್ದೇವೆ ಅದು ಇತಿಹಾಸವಾಗಿ ಉಳಿಯಬೇಕು.

ಒಂದೊಂದು ಕ್ಷೇತ್ರದ ಒದು ಒಂದೂವರೆ ಲಕ್ಷ ಜನ ನಮಗೆ ಸ್ಥಾನಮಾನ ಕೊಟ್ಟು ಇಲ್ಲಿ ಕೂರಿಸುತ್ತಾರೆ. ಅವರಿಗೆ ಕುಳಿತುಕೊಳ್ಳಲು ಸೂರಿಲ್ಲ, ಕುಡಿಯಲು ನೀರಿಲ್ಲ, ಶಕ್ಷಣಕ್ಕೆ ಬೇಕಾದ ವ್ಯವಸ್ಥೆ ಇಲ್ಲ, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋದರೆ ಔಷಧಿಯಿಲ್ಲ ವೈದ್ಯರಿಲ್ಲ ಇಂಥಾ ಪರಿಸ್ಥಿತಿಯಲ್ಲಿ ಅವನು ಬೊಬ್ಬೆಹೊಡೆಯುತ್ತಿರುವಾಗ ನಾವು ಐದು ವರ್ಷ ಐಷಾರಾಮ ಜೀವನ ನಡೆಸಬೇಕೆ? ಎಂಬ ಆತ್ಮ ವಿಮರ್ಶೆಯ ಕೆಲಸ ಮಾಡಬೇಕಾಗಿದೆ. ಇದಕ್ಕೆ ಒಂದು ಪಕ್ಷ ಇನ್ನೊಂದು ಪಕ್ಷವೆಂದು ದೂಷಣೆ ಮಾಡಿಕೊಂಡು ಹೋಗುವುದಲ್ಲ. ಮುಖ್ಯವಾಗಿ ಇವತ್ತು ಅಧಿಕಾರಿಗಳು ಸರ್ಕಾರದ ಕೈಯಲಿಲ್ಲ. ಅವರು ಅವರದೇ ಆದ ರಾಜ್ಯದಲ್ಲಿ ಮೆರೆಯುತ್ತಿದ್ದಾರೆ. ಕೇವಲ ಬೆರಳೆಣಿಕೆಯ ಮಂತ್ರಿಗಳನ್ನು ಬಿಟ್ಟರೆ ಬಾಕಿ ಯಾವ ಸಚಿವರಿಗೂ ಅವರ ಅಧಿಕಾರಿಗಳ ಮೇಲೆ ಹೊಣೆಗಾರಿಕೆ ಇಲ್ಲ. ಕೆಲವು ಕಡತಗಳು ಮಂತ್ರಿಗಳಿಗೆ ಬಾರದೇ ಕಾರ್ಯದರ್ಶಿ ಮಟ್ಟದಲ್ಲೇ ಹೋಗುವ ಪರಿಸ್ಥಿತಿ ಬಂದಿದೆ ಅಂದರೆ ನಾವೇನು ಹೇಳಬೇಕು? ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ 1984ರ ಡಿಸೆಂಬರ್ 26ನೇ ತಾರಿಖು ಮೊದಲನೇ ಅಧಿವೇಶನ ನಡೆದಾಗ ಶೂನ್ಯವೇಳೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದು ಯಡಿಯೂರಪ್ಪನವರು ನನ್ನ ಕ್ಷೇತ್ರದ ಸಮಸ್ಯೆ ಒಂದನ್ನು ಎತ್ತಿದರು ಒಂದು ಕಂದಾಯ ಭೂಮಿಯಲ್ಲಿ 1400 ಜನರಿಗೆ ಹಕ್ಕು ಪತ್ರ ವಿತರಣೆ ಮಾಡಿ ಆಮೇಲೆ ಅದು ಅರಣ್ಯ ಇಲಾಖೆಯದ್ದೆಂದು ಹೇಳಿ ಮನೆ ಕಟ್ಟಿದ್ದವರನ್ನು ನಿಲ್ಲಿಸಿ ಹಕ್ಕುಪತ್ರಗಳನ್ನು ಕಾನ್ಸೆಲ್ ಮಾಡಿದರು. ಅದು ಅರಣ್ಯ ಇಲಾಖೆಯದು ಆಗಿರಲಿಲ್ಲ. ಆದರೂ ಅರಣ್ಯ ಇಲಾಖೆ ಸುಳ್ಳು ಪ್ರಸ್ತಾವ ಸಲ್ಲಿಸಿ ಹಕ್ಕುಪತ್ರದಾರರನ್ನು ಎಬ್ಬಿಸುವ ಕೆಲಸ ನಡೆಯಿತು. 1984ನೇ ಡಿಸೆಂಬರ್ 26ರಿಂದ ಇವತ್ತಿನವರೆಗೆ ವಿವಿಧ ಅಧಿವೇಶನದಲ್ಲಿ ನಾನಾ ರೂಪದಲ್ಲಿ ಸರ್ಕಾರದ ಗಮನ ಸೆಳೆದರೂ ಕೂಡ ಕಂದಾಯ ಇಲಾಖೆಯಿಂದಾಗಲಿ ಅರಣ್ಯ ಇಲಾಖೆಯಿಂದಾಗಲಿ ನಮಗೆ ಉತ್ತರ ಬರಲಿಲ್ಲ. ನಾಲ್ಕು ವರ್ಷ ಮುಗಿದುಹೋಯಿತು, ಈಗ ಮತ ಯಾಚನೆ ಮಾಡಲು ಅಲ್ಲಿಗೆ ಹೋದರೆ ಕೇಳುತ್ತಾರೆ ಅವರಿಂದಾಗಲಿಲ್ಲವೆಂದು ನಿಮ್ಮನ್ನು ಕಳುಹಿಸಿದೆವು ನೀವು ಏನು ಮಾಡುತ್ತಿದ್ದೀರಿ ಎಂದು ಕೇಳಿದಾಗ ನಾನೇನು ಉತ್ತರ ಕೊಡುವುದು? ಮಾನ್ಯ ಮಂತ್ರಿಗಳೇ, ಇನ್ನಿರುವುದು ಆರು ತಿಂಗಳು, ಹೇಗೂ ನಾಲ್ಕೂವರೆ ವರ್ಷ ಕೆಳೆದುಕೊಂಡಿದ್ದೀರಿ ಆಂತರಿಕ ಜಗಳವಿರಲಿ ಹೊರಜಗಳ ಇರಲಿ, ಅದೇನೆ ಇರಲಿ ಆದರೆ ಇಲ್ಲಿ ಒಟ್ಟಾಗಿ ನಾಟಕ ಮಾಡಿರಬಹುದು ನಿಮ್ಮ ಆತ್ಮಸಾಕ್ಷಿ ನೋಡಿದರೆ ನೀವು ಉರುದುಹೋಗುತ್ತೀದ್ದೀರಿ, ನನಗೆ ಅದು ಸಿಗಲಿಲ್ಲ ಇದು ಸಿಗಲಿಲ್ಲ ಎಂದು ಹೇಗೋ ಸಮಾಧಾನ ಪಡಿಸಿ 51 ಜನರ ಮಂತ್ರಿಮಂಡಲ ರಚಿಸಿಕೊಂಡಿರಿ, ಇರಲಿ, ಇನ್ನುಳಿದ 6 ತಿಂಗಳು ನೀವೇ ಇರುತ್ತೀರಿ ಎಂದು ಹೇಳಿಕೊಳ್ಳುತ್ತೀರಿ, ಆಗಲಿ ಆ ಆರು ತಿಂಗಳಾದರೂ ಚರಿತ್ರಾರ್ಹವಾಗಿರಲಿ. ಆ ಆರು ತಿಂಗಳು ಪುನ ಜಗಳ ಮಾಡಿಕೊಂಡು ಮಂಗಡಪತ್ರ ಅಧಿವೇಶನವಾದ

ಮೇಲೆ ನಿಮ್ಮಷ್ಟಕ್ಕೆ ನೀವೇ ಆದರೆ ಅಧಿಕಾರಿಗಳು ಕೆಲಸ ಮಾಡಿ ಮೆಲ್ಲುತ್ತಿರುತ್ತಾರೆ. ಮುಕ್ಕಾಲು ಅಂಶ ಮೆಲ್ಲುವವರು ಅವರು, ಕಾಲಂಶ ನಿಮ್ಮ ಮೂತಿಗೆ ಸವರಿ ಹೋಗುತ್ತಿರುತ್ತಾರೆ. ಎಲ್ಲಿ ನೋಡಿದರಲ್ಲಿ ಬುದ್ಧಿ ಜೀವಿಗಳು ಪತ್ರಿಕೆಗಳು ಬರೆಯುವುದು ರಾಜಕಾರಣಿಗಳು ಭ್ರಷ್ಟ ಎಂದು. ಹೌದು ಜನತಾದಳದ ನಿಮಗೆ ನಾವು ಸಗಣಿ ಹಚ್ಚುತ್ತೇವೆ, ನೀವು ನಮಗೆ ಸಗಣಿ ಹಚ್ಚುತ್ತೀರಿ ಆದರೆ ಅಧಿಕಾರಿಗಳು ತಮ್ಮ ಬೌಕಟ್ಟಿನಲ್ಲಿ ನಡೆಸುವು ಭ್ರಷ್ಟಾಚಾರವನ್ನು ಇವತ್ತು ನಾವು ಹೊರಗೆ ತಂದರೂ ಕೂಡ ಯಾಕೆ ನೀವು ಅದರ ಬಗ್ಗೆ ಪ್ರಯತ್ನಪಡಲಿಲ್ಲ? ಎಷ್ಟೋ ಭ್ರಷ್ಟ ಪ್ರಕರಣಗಳನ್ನು ನಾವು ತಂದರೂ ಕೂಡ ಆ ಅಧಿಕಾರಿ ಮೇಲೆ ಸಸ್ಪೆನ್‌ಷನ್ ಆರ್ಡರ್ ಮಾಡಿ, ನಾಲ್ಕು ದಿವಸ ಬಿಟ್ಟು ಅದನ್ನು ರಿವೋಕ್ ಮಾಡಿ ಮತ್ತೊಂದು ಉನ್ನತ ಹುದ್ದೆಗೆ ಬಡ್ತಿ ನೀಡಿ ಕಳುಹಿಸುತ್ತೀರಿ ಎಂದು ಅನ್ನುವುದಾದರೆ ನಿಮ್ಮ ಆಡಳಿತ ವ್ಯವಸ್ಥೆ ಹೇಗಿದೆ ಎಂಬುದನ್ನು ತೋರಿಸುತ್ತದೆ. ಅಧ್ಯಕ್ಷರೇ, ಈ ಸರ್ಕಾರದಿಂದ ರಾಜ್ಯದ ಜನತೆಗೆ ಯಾವ ಹಿತವೂ ಇಲ್ಲವೆಂದು ಅವರೇ ಸ್ಪಷ್ಟಪಡಿಸಿಕೊಂಡಿದ್ದಾರೆ. ಬೆನ್ನು ತಟ್ಟಿಕೊಳ್ಳುವುದಕೋಸ್ಕರ ಒಬ್ಬ ಹೊಗಳು ಭಟ್ಟರನ್ನು ಸೃಷ್ಟಿಸಿ ಹೇಳಿಸಿಕೊಂಡಿರಬಹುದು. ಆದರೆ ನೀವೇ ಆತ್ಮ ವಿಮರ್ಶೆ ಮಾಡಿಕೊಳ್ಳಿ, ಸರಿಯಾಗಿ ಕೆಲಸ ನಿರ್ವಹಿಸಿದ್ದೇವೆಂಬ ಆತ್ಮ ತೃಪ್ತಿ ನಿಮಗಿದ್ದರೆ ಪರವಾಗಿಲ್ಲ. ಆದರೆ ಖಂಡಿತವಾಗಿ ಮನಸಿನೊಳಗೆ ನೀವು ಹೇಳಿಕೊಳ್ಳುತ್ತೀರಿ ಅಯ್ಯೋ ದೇವರೆ, ಈ ಪ್ರಾಯದಲ್ಲಿ ನನಗೆ ಆಡಳಿತ ನಡೆಸಲು ಸಿಕ್ಕಿದರೂ, ಆಡಳಿತವನ್ನು ಸುವ್ಯವಸ್ಥೆಯಲ್ಲಿಡಬೇಕೆಂದರೆ ಸಹಸದಸ್ಯರು ಬಿಡುತ್ತಿಲ್ಲವಲ್ಲ? ಎಂಬ ವೇದನೆ ನಿಮ್ಮಲ್ಲಿ ಇದ್ದೇಇದೆ. ಆದ್ದರಿಂದ ಮುಂದಿನ 6 ತಿಂಗಳಾದರೂ ಆಡಳಿತವನ್ನು ಸುಗಮಗೊಳಿಸಿ....

ಶ್ರೀ ಎಲ್.ಆರ್. ಶಿವರಾಮೇಗೌಡ :— ಈಗ ಪಾಯಿಂಟ್ ಆಫ್ ಆರ್ಡರ್. ಹೊಗಳು ಭಟ್ಟರು ಎಂದು ಇವರು ಹೇಳಿದ್ದು ರೆಕಾರ್ಡ್‌ಗೆ ಹೋಗಿದೆ. ನಾನು ಸರ್ಕಾರ ಮಾಡಿರುವ ಸಾಧನೆಗಳನ್ನು ಹೇಳಿದ್ದೇನೆ. ಇವರು ಮೊದಲಿನಿಂದಲೂ ಹೀಗೆನೇ, ಬರೀ ಹೊಗಳುಭಟ್ಟರ ಕೆಲಸವೇ, ಇವರೇ ಹೊಗಳುಬಟ್ಟರು, ನಾವ್ಯಾರೂ ಅಲ್ಲ.

ಶ್ರೀ ಯು.ಆರ್. ಸಭಾಪತಿ :— ಪಾಪ ಅಲ್ಲಿ ಜನತಾದಳದ ಸದಸ್ಯರು ನಮಗೆ ಸಿಗಲಿಲ್ಲ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ, ಸಹಸದಸ್ಯರು ಹೊಗಳಿ ಹೊಗಳಿ ಅಧಿಕಾರ ಹಿಡಿದರು.

ಅಧ್ಯಕ್ಷರು :— ಹೊಗಳುಭಟ್ಟರು ಎಂದು ಅವರು ನಿಮ್ಮನ್ನು ಹೇಳುವ ಹಾಗಿಲ್ಲ. ನೀವು ಅವರನ್ನು ಹೇಳುವ ಹಾಗಿಲ್ಲ. ನೀವೆಲ್ಲಾ ಗೌರವಾನ್ವಿತ ಸದಸ್ಯರು.

ಶ್ರೀ ಎಲ್.ಆರ್. ಶಿವರಾಮೇಗೌಡ :— ಅಲ್ಲ ಇವರು ಬಂಗಾರಪ್ಪನವರನ್ನು ಹೊಗಳಿ ಹೊನ್ನಶೂಲಕ್ಕೇರಿಸಿ ಮುಗಿಸಿ ಈಗಿಲ್ಲಿ ಬಂದಿದ್ದಾರೆ.

ಶ್ರೀ ಯು.ಆರ್. ಸಭಾಪತಿ :— ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ನಾನು ಸಂಪೂರ್ಣ ವಿರೋಧಿಸಿ, ರಾಜ್ಯ ಸರ್ಕಾರ ಇನಷ್ಟು ಎಚ್ಚರಿಕೆಯಿಂದ ನಡೆಯಲಿ ಎಂದು ಹಾರೈಸಿ ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು :— ಈ ದಿವಸ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ದಿನಾಂಕ: 27-3-99 ಶನಿವಾರದ ಅಧಿವೇಶನದಂದು ತೆಗೆದುಕೊಳ್ಳಲಾಗುವುದು.

ಶ್ರೀ ಎಚ್.ಎನ್. ನಂಜೇಗೌಡ :— ಅಧ್ಯಕ್ಷರೇ, ನಾನೊಬ್ಬ ಅನ್‌ಅಟಾಚ್ಡ್ ಸದಸ್ಯ ನಿಮಗೇ ಅಟಾಚ್ಡ್. ನನಗೆ ಕೆಲಸಗಳಿವೆ, ನಾಡಿದ್ದು ಒಂದು ಸಮಾವೇಶ ಕರೆದಿದ್ದೇನೆ. ಇವತ್ತೇ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು :— ಆಗಬಹುದು.

+ ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದ ಮೇಲೆ ವಂದಾನಾ ನಿರ್ಣಯದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ತಮಗೆ ಮೊಟ್ಟಮೊದಲನೆಯದಾಗಿ ನಾನು ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರ ಈಗಿನ ಭಾಷಣ ಇದು ತುಂಬಾ ಮಹತ್ವ ಪಡೆದಿದೆ ಎಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ ವಿಧಾನಮಂಡಲದಲ್ಲಿ ರಾಜ್ಯಪಾಲರ ಭಾಷಣ ಇದು ಕೊನೆಯ ಭಾಷಣ. ಕಳೆದ ನಾಲ್ಕೂವರೆ ವರ್ಷಗಳಿಂದ ಅನೇಕ ಭಾಷಣಗಳನ್ನು ರಾಜ್ಯಪಾಲರು ಮಾಡಿದ್ದಾರೆ. ಆ ನಾಲ್ಕು ಭಾಷಣದ ಪ್ರತಿ ಕೂಡ ನನ್ನ ಹತ್ತಿರ ಇದೊ. ಜೊತೆಗೆ ಹಿಂದಿನ ಈ ಸರ್ಕಾರದ ಸಾಧನೆಗಳೇನು, ಬರುವ ದಿನಗಳಲ್ಲಿ ಈ ಸರ್ಕಾರ ಏನು ಸಾಧನೆ ಮಾಡುತ್ತದೆ ಎನ್ನುವ ಅಂಶವನ್ನು ಕೂಡ ರಾಜ್ಯಪಾಲರು ಈ ಭಾಷಣದ ಸಂಬಂಧದಲ್ಲಿ ಪ್ರಸ್ತಾಪ ಮಾಡಬೇಕೆಂದು ನನಗೆ ಅನಿಸುತ್ತದೆ. ಏತಕ್ಕೆಂದರೆ ಕಳೆದ ವಿಧಾನಸಭಾ ಚುನಾವಣೆಗೆ ಮುಂದೆ ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಈ ರಾಜ್ಯದಲ್ಲಿ ಜನತೆಯ ಮುಂದೆ ಹೋಗಿ ನಮ್ಮ ನಮ್ಮ ಚುನಾವಣಾ ಪ್ರಣಾಳಿಕೆಯನ್ನು ನಾವು ಇಟ್ಟಿವು. ಈ ರಾಜ್ಯದ ಜನ ಜನತಾದಳವನ್ನು ಆರಿಸಿತು. ಈ ರಾಜ್ಯದ ಹಿತವನ್ನು ನೀವು ಕಾಪಾಡಿ, ಈ ರಾಜ್ಯದ ಸರ್ವ ಉನ್ನತಿಯನ್ನು ನೀವು ಮಾಡಬೇಕೆಂದು ಹೇಳಿ ಆಶಿರ್ವಾದ ಮಾಡಿದರು. ಅವರ ಪ್ರಣಾಳಿಕೆಯಲ್ಲಿ 94ರಲ್ಲಿ ಇಟ್ಟಂಥ ಒಂದು ಆಕರ್ಷಣೀಯವಾದ ಘೋಷಣೆ ಎಂದರೆ ಸ್ವಾಭಿಮಾನ, ಸಮೃದ್ಧ ಕರ್ನಾಟಕಕ್ಕಾಗಿ. ಎಂದು ಹೇಳಿದ್ದ ಚುನಾವಣಾ ಪ್ರಣಾಳಿಕೆ ಕೂಡ ಇದೆ. ಜೊತೆಗೆ ಕೆಲವು ವಿವರಣೆಯನ್ನು